SRI V. S. PATIL.—Only the Chief Minister is going out; other Ministers will be here.

MR. SPEAKER.—Does he not think that this matter perhaps should be fixed up within the members, the Whips and others ? Let the Debate commence and then we will consider. If members want more time, I personally, have no objection.

DISCUSSION ON A MATTER OF URGENT PUBLIC IMPORTANCE FOR SHORT DURATION *re*: THE ACUTE SCARCITY CONDITIONS PREVAILING IN THE STATE.

MR. SPEAKER.—Now the discussion on a matter of urgent Public Importance under Rule 59. Sriyuths S. Gopala Gowda, P. Venkatagiriappa, Andaniah and G. Ramegowda have given notice of raising the discussion for short duration. Sri Gopalagowda may speak first.

† ಶ್ರೀ ಎಸ್. ಗೋಪಾಲ ಗೌಡ.—ಮಾನ್ಯ ಅಧ್ಯಕ್ಷರೇ, ಈಚೆಗೆ ಈ ರಾಜ್ಯದಲ್ಲಿ ಅಲ್ಲಲ್ಲಿ ಸ್ವಲ್ಪ ಮಳೆ ಬಿದ್ದಿದೆ, ಹಾಗೂ ಬೀಳುತ್ತಾ ಇದೆ. ಆದಾಗ್ಯೂ ಕೆಲವು ಪ್ರದೇಶಗಳಲ್ಲಿ ಇನ್ನೂ ಸಾಕಷ್ಟು ಮಳೆ ಬಿದ್ದಿಲ್ಲ, ಕೆಲವು ಕಡೆ ಏನೂ ಮಳೆ ಬಿದ್ದಿಲ್ಲ. ಹಿಂದೆ ಇದ್ದಂಥ ಅಭಾವ ಪರಿಸ್ಥಿತಿ ಈಚೆಗೆ ಈ ಕಾರಣದಿಂದಾಗಿ ಬಹಳ ಉತ್ಕಟವಾಗಿದೆ ಎಂಬ ವರದಿಗಳನ್ನು ನಾವು ಕೇಳುತ್ತಾ ಇದ್ದೇವೆ. ಕೆಲವು ಕಡೆಗಳಲ್ಲಿ ಆಹಾರ ದೊರೆಯದೆ ಉಪವಾಸ ಬಿದ್ದ ಜನರು ಸತ್ತಿರತಕ್ಕ ವರದಿಗಳೂ ಕೂಡ ಬಂದಿವೆ. ಚನ್ನಗಿರಿ ತಾಲ್ಲೂಕಿನಲ್ಲಿ ಹೋದ ತಿಂಗಳು ಅಂತಹ ಒಂದು ವರದಿ ಬಂತು. ಆಮೇಲೆ ಅದು ನಿಜವಲ್ಲ ಎಂದು ಹೇಳಿ ಜಿಲ್ಲಾಧಿಕಾರಿಗಳು ಒಂದು ವರದಿಯನ್ನು ಕೊಟ್ಟರು. ಉಪವಾಸ ಬಿದ್ದು ಹೊಟ್ಟೆಗೆ ಇಲ್ಲದೆ ಸತ್ತದ್ದು ಇಲ್ಲ ಎಂದು. ಈಚೆಗೆ ಕಡೂರು ತಾಲ್ಲೂಕಿನಿಂದ ಎರಡು ವರದಿಗಳು ಬಂದವು. ಒಬ್ಬ ಗರ್ಭಿಣಿ ಸ್ತ್ರೀ ತನ್ನ ಎರಡು ಮಕ್ಕಳ ಜೊತೆಯಲ್ಲಿ ಕೆರೆಯಲ್ಲಿ ಹಾರಿ ಪ್ರಾಣ ಬಿಟ್ಟಳು, ಎರಡು ಮೂರು ದಿವಸದ ಮೇಲೆ ಆ ಹೆಣಗಳು ಮೇಲೆ ಬಂದವು ಎಂದು ವರದಿ ಬಂತು. ಇನ್ನೊಂದು ಕಡೆ ಗಂಜಿಯಲ್ಲಿ ವಿಷ ಬೆರೆಸಿ ತಾನೂ ತನ್ನ ಮಕ್ಕಳೂ ಎಲ್ಲಾ ತಿಂದು ಪ್ರಾಣ ಬಿಟ್ಟರು. ಅದೂ ಕೂಡ ಕಡೂರು ತಾಲ್ಲೂಕಿನಲ್ಲೇ ಆದದ್ದು. ಇತ್ತೀಚೆಗೆ ನಡೆದ ಘಟನೆ, ಮಕ್ಕಳು ಮತ್ತು ಮಹಿಳೆ ತೀರಿ ಹೋದರು, ಆ ಗಂಡ ಹೇಗೋ ಆಸ್ಪತ್ರೆಗೆ ಹೋಗಿ ಬದುಕಿ ಬಂದ ಎಂದು ಕೇಳುತ್ತೇವೆ. ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಮದರಾಸ್ ರಾಜ್ಯದಲ್ಲೂ ಕೂಡ ಈ ರೀತಿಯಾಗಿ ಹೊಟ್ಟೆಗಿಲ್ಲದ ಕಾರಣಕ್ಕಾಗಿ ಆತ್ಮಹತ್ಯೆ ಮಾಡಿಕೊಳ್ಳುವುದು ದಿನನಿತ್ಯದ ಸ್ಥಿತಿಯಾಗಿದೆ. ಇಲ್ಲಿ ಒಂದು ವರದಿ ಇದೆ, 40 ವರ್ಷದ ಒಬ್ಬಳು ಸ್ತ್ರೀ ತನ್ನ ಮೂವರು ಮಕ್ಕಳೊಂದಿಗೆ—ಒಂದು ಮಗು ಒಂದು ವರ್ಷದ ಮಗುವಾಗಿತ್ತು ಕ್ರೋಂ ಪೇಟೆ—ಕಾಂಜೀವರಂ ಪ್ಯಾಸೆಂಜರ್ ಟ್ರೈನ್‌ಗೆ ಸಿಕ್ಕಿ ಸತ್ತು ಹೋದಳು, ಅವರೆಲ್ಲರೂ ಸತ್ತು ಹೋದರು ಎಂದು ವರದಿ ಬಂದಿದೆ. ನಮ್ಮ ದೇಶದಲ್ಲಿ ಈ ರೀತಿಯಾಗಿ ಜನ ಹೊಟ್ಟೆಗಿಲ್ಲದೆ ಸಾಯುವ ಸ್ಥಿತಿ ಇದು ಬಹಳ ಜನರಿಗೆ ವಿಶೇಷವಾಗಿ ಏನೂ ಕಾಣುವುದಿಲ್ಲ ಕಾರಣ ನಾವು ಎಲ್ಲ ಹೋದರೂ ಬಸ್ ಸ್ಟ್ಯಾಂಡ್‌ನಲ್ಲಾಗಲಿ, ರೈಲ್ವೆ ಸ್ಟೇಷನ್‌ನಲ್ಲಾಗಲಿ ಅಥವಾ ಹೋಟೇಲ್ ನಲ್ಲಾಗಲಿ, ಬೀದಿಯಲ್ಲಾಗಲಿ ಅಪಾರ ಸಂಖ್ಯೆಯಲ್ಲಿ ಭಿಕ್ಷೆ ಬೇಡುವವರನ್ನು ನೋಡುತ್ತೇವೆ. ಅದು ಒಂದು ವರ್ಗ ಇದೆ. ಇನ್ನು ಅರೆ ಹೊಟ್ಟೆ ಊಟ ಮಾಡತಕ್ಕ ಜನರ ಸಂಖ್ಯೆ ನಮ್ಮ ದೇಶದಲ್ಲಿ ಬಹಳ ವಾಗಿ ಇದೆ. ಹೀಗಿರುವಾಗ ಈ ವರ್ಷ ಇದು ಪರಾಭವ ಸಂವತ್ಸರ ಎಂದು ಆಗಲೇ ಹೇಳಿದ್ದೆ ಈ ಪರಾಭವ ಸಂವತ್ಸರದಲ್ಲಿ ಡಾಕ್ಟರ್ ಲೋಹಿಯಾರವರು ಮೊನ್ನೆ ಪಾರ್ಲಿಮೆಂಟಿನಲ್ಲಿ ಹೇಳಿದ ಹಾಗೆ ಎರಡು ದೊಡ್ಡ ಆಘಾತಗಳನ್ನು ದೇಶ ಎದುರಿಸುತ್ತಾ ಇದೆ. ಒಂದು ಪ್ರಕೃತಿಯ ಪ್ರಕೋಪಕ್ಕೆ ಒಳಗಾಗಿ ಹೋದ ವರ್ಷ ಹಿಂಗಾರು ಮಳೆ ಬಾರದೆ ದೇಶದ ಬಹು ಭಾಗದಲ್ಲಿ ಮುಖ್ಯವಾದ ಎಲ್ಲಾ ಬೆಳೆಗಳೂ ಸತ್ತುಹೋದದ್ದು, ಅದರಿಂದಾಗಿರತಕ್ಕ ಆಹಾರ ಧಾನ್ಯದ ಉತ್ಪನ್ನಕ್ಕೆ ಆಗಿರತಕ್ಕ ದೊಡ್ಡ ಪೆಟ್ಟು. ಮತ್ತೊಂದು ಜೂನ್ 6ನೆಯ ತಾರೀಖು ಕೇಂದ್ರ ಸರ್ಕಾರದವರು ರೂಪಾಯಿನ ಬೆಲೆ ಯನ್ನು 36.5 ಪರ್ಸೆಂಟ್ ನಷ್ಟು ಇಳಿಸಿದ್ದು ಅಥವಾ ಅಪಮೌಲ್ಯ ಮಾಡಿದ್ದು. ಈ ಎರಡೂ ಒಟ್ಟು ಗೂಡಿ ಇವತ್ತು ದೇಶದಲ್ಲಿ ಪ್ರತಿಯೊಂದು ಜೀವನಾವಶ್ಯಕ ವಸ್ತುವಿನ ಬೆಲೆಯೂ ಹಿಂದೆ ಎಂದೂ ಎಲ್ಲೂ ಕಂಡರಿಯದ ರೀತಿಯಲ್ಲಿ ಏರುತ್ತಾ ಇದೆ.

4-30 P.M.

ಸರ್ಕಾರದವರು ಆಗ ಏನು ಕಾರಣ ಕೊಟ್ಟರು ಎಂದರೆ, ರೂಪಾಯಿಯನ್ನು ಅಪಮೌಲ್ಯ ಮಾಡುವುದರಿಂದ ದೇಶದಲ್ಲಿ ಉತ್ಪಾದನೆಯಾಗತಕ್ಕ ಅಂದರೆ ವಿದೇಶೀ ವಿನಿಮಯವಿಲ್ಲದೆ, ಅದರ ಸಂಬಂಧವಿಲ್ಲದೆ ಉತ್ಪಾದನೆಯಾಗತಕ್ಕ ವಸ್ತುಗಳ ಬೆಲೆಗೂ ಇದಕ್ಕೂ ಏನೂ ಸಂಬಂಧವಿಲ್ಲ, ಇವುಗಳ ಬೆಲೆ ಏರುವುದಿಲ್ಲ, ಹಾಗೆ ಅವುಗಳ ಬೆಲೆಯನ್ನು ಏರಿಸತಕ್ಕದ್ದೂ ಸಹಾ ಸರಿಯಾದ್ದಲ್ಲ ಎಂದು ವಾದ ಮಾಡಿದ್ದರು. ಡಾಲರಿಗೆ ಸಂಬಂಧಪಟ್ಟ ಹಾಗೆ ವಿದೇಶೀ ವಿನಿಮಯಕ್ಕೆ ಒಳಪಡತಕ್ಕ ವಸ್ತುಗಳನ್ನು ಕೊಳ್ಳತಕ್ಕ ಸಂದರ್ಭದಲ್ಲಿ ಮಾತ್ರ ರೂಪಾಯಿಯನ್ನು ನಾವು ಅಪಮೌಲ್ಯಗೊಳಿಸಿದ್ದೇವೆಯೇ ಹೊರತು ಒಳರಾಷ್ಟ್ರದಲ್ಲಿ ಉತ್ಪಾದನೆಯಾಗತಕ್ಕ ವಸ್ತುಗಳಿಗೆ ಇದರ ಬಾಧಕವಿಲ್ಲ, ಇಲ್ಲಿ ಒಂದು ರೂಪಾಯಿಗೆ ಪೈಸೆಗಳನ್ನು ಕೇಳಿದರೆ 100 ಪೈಸೆಗಳನ್ನೇ ಕೊಡಬೇಕು ಎಂತ ವಾದ ಮಾಡಿದ್ದರು. ಆದರೆ ಇರತಕ್ಕ ವಾಸ್ತವಾಂಶಗಳನ್ನು ನೋಡಿದರೆ ಅದು ತದ್ವಿರುದ್ಧವಾಗಿದೆ. ರೂಪಾಯಿಯನ್ನು ಅಪಮೌಲ್ಯಗೊಳಿಸತಕ್ಕ ಕಾಲದಲ್ಲಿ ಸರ್ಕಾರದವರೇನು ನಿರೀಕ್ಷಿಸಿದ್ದರೋ ಅದು ಆಗಲಿಲ್ಲ. ಅಪಮೌಲ್ಯ ಮಾಡಿದ ಒಂದು ವಾರದಲ್ಲಿಯೇ ಸಗಟು ವ್ಯಾಪಾರದ ಧಾರಣೆಗಳು ಶೇಕಡ 2.5ರಷ್ಟು ಹೆಚ್ಚಾದುದೇ ಅಲ್ಲದೆ ಸಾಮಾನ್ಯವಾಗಿ ನಾವು ಎಲ್ಲಾ ವಸ್ತುಗಳ ಬೆಲೆಯಲ್ಲೂ ಶೇಕಡ 16.9ರಷ್ಟು ಒಟ್ಟಿನಲ್ಲಿ ಏರಿಕೆಯನ್ನು ನಾವು ನೋಡುತ್ತಿದ್ದೇವೆ. ಈ ವರ್ಷದ ಜೂನ್ ಆರಕ್ಕೆ ಮುಂಚೆ ಡೀವ್ಯಾಲ್ಯುಯೇಷನ್ ಆಗುವ ಮುನ್ನ ಆಹಾರಧಾನ್ಯಗಳ ಬೆಲೆ ಶೇಕಡ 1.6ಕ್ಕೆ ಏರಿತು, ವನಸ್ಪತಿಗಳ ಬೆಲೆ ಶೇಕಡ 7ಕ್ಕೆ ಏರಿತ್ತು, ಕೈಗಾರಿಕಾ ವಸ್ತುಗಳ ಬೆಲೆಯು ಶೇಕಡ 1.3ರಷ್ಟು ಏರಿತ್ತು. 1964ನೇ ಮೇ ತಿಂಗಳ ಆಖೈರಿನಲ್ಲಿದ್ದ ಒಟ್ಟು ಬೆಲೆಗಳ ಪ್ರಮಾಣ 1966ನೇ ಮೇ ಆಖೈರಿಗೆ 182.4ಕ್ಕೆ ಹೋಯಿತು. ಇದೆಲ್ಲವನ್ನೂ ನಾವು ಗಮನಿಸಿದರೆ ನಮಗೆ ಇಂದಿನ ಬೆಲೆಗಳ ಏರಿಕೆ ವಿದೇಶೀ ವಿನಿಮಯದ ಸಂಬಂಧವಿರಲಿ ಇಲ್ಲದಿರಲಿ ಅವು ನಾಗಾಲೋಟದಲ್ಲಿ ಓಡುತ್ತಿವೆ. ನಮ್ಮ ಹಣಕಾಸಿನ ಸಚಿವರೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳೂ ಇಲ್ಲಿ ಹಾಲು ತರಕಾರಿಗಳ ಬೆಲೆ ಏರುವುದಕ್ಕೂ ರೂಪಾಯಿಯನ್ನು ಅಪಮೌಲ್ಯಗೊಳಿಸಿದ್ದಕ್ಕೂ ಏನೂ ಸಂಬಂಧವಿಲ್ಲ ಎಂದು ಹೇಳಿದರು. ಆದರೆ ಇದರ ಸಂಬಂಧ ಹಾಲು ಮಾರತಕ್ಕ ಮನುಷ್ಯನಿಗೂ ಇದೆ. ಅವನ ಆಕಳಿಗೆ ಬೇಕಾದ ಬೂಸ ನಿಖರವಾದ ಬೆಲೆಯಲ್ಲಿ ಸಿಕ್ಕದಿದ್ದರೆ ಅದನ್ನು ಅವನು ಕಾಳಸಂತೆಯಲ್ಲಿ ಕೊಳ್ಳಲೇ ಬೇಕು. ಆದರಿಂದ ಹಾಲಿನ ಬೆಲೆ ಏರಲೇಬೇಕು. ಜಾನುವಾರುಗಳಿಗೆ ಕುಡಿಯಲು ನೀರೇ ಸಿಕ್ಕುವುದಿಲ್ಲ, ಹಾಗಿರುವಾಗ ಅವುಗಳಿಗೆ ಮೇವನ್ನು ತಂದು ಸಾಕುವುದಿರಲಿ, ತಾನು ಬದುಕುವುದೇ ಕಷ್ಟವಾಗಿರುವಾಗ ಅವನು ತನ್ನ ಆಕಳನ್ನು ಸಾಕಿರುವುದರಿಂದ ಹಾಲಿನ ಬೆಲೆಯನ್ನೂ ಏರಿಸಲೇಬೇಕಾಗುವುದು. ಹೀಗಿರುವಾಗ ಡೀವ್ಯಾಲ್ಯುಯೇಷನ್ನಿಗೂ ಇವುಗಳಿಗೂ ಏನೂ ಸಂಬಂಧವಿಲ್ಲ ಎಂದು ಹೇಳತಕ್ಕ ವಾದ ವಿವೇಕಯುತವಾದವಲ್ಲದ ಕಾರಣ ನಾವು ಅದನ್ನು ತಿರಸ್ಕರಿಸಬಹುದು. ತರಕಾರಿಗಳ ವಿಚಾರವೂ ಅಷ್ಟೇ, ಅವೇನೂ ಇಲ್ಲಿಗೆ ಅಮೇರಿಕಾದಿಂದ ಬರುವುದಿಲ್ಲ, ಆದಾಗ್ಯೂ ಆ ಬೆಳೆಗೆ ಬೇಕಾದ ಗೊಬ್ಬರ ಮತ್ತು ಪೆಸ್ಟಿಸೈಡ್ಸ್ ಇವುಗಳ್ಯಾವುವೂ ಸಿಕ್ಕುವುದಿಲ್ಲ. ಯಾವುದೋ ರೀತಿಯಲ್ಲಿ ಅವನು ಕಷ್ಟಪಟ್ಟುಕೊಂಡು ಬೆಳೆಸಿದ ಬದನೇಕಾಯನ್ನೊ, ಬೆಂಡೇಕಾಯನ್ನೊ ಹಿಂದೆ ಕಿಲೋ ಒಂದಕ್ಕೆ ಒಂದು ರೂಪಾಯಿಗೆ ಮಾರುತ್ತಿದ್ದುದನ್ನು ಈಗ ಒಂದು ರೂಪಾಯಿ ಮೂವತ್ತೈದು ಪೈಸೆಗೆ ಮಾರುತ್ತಾನೆ. ತಿನ್ನತಕ್ಕವರು ಕೊಂಡು ತಿನ್ನಲೇ ಬೇಕು. ಹೀಗೆ ಪ್ರತಿಯೊಂದು ವಸ್ತುವಿಗೂ ಆಯಾತ ನಿರ್ಯಾತಗಳಿದ್ದೇ ಇರುತ್ತವೆ. ಇವುಗಳಿಗೆ ಅದು ಸಂಬಂಧವಿಲ್ಲ ಎಂದು ಹೇಳಿದರೆ ಇದು ಅಂಥ ತರ್ಕಬದ್ಧವಾದ ವಿಷಯ ಅಲ್ಲವೇ ಅಲ್ಲ. ಅಂತೂ ಈ ದಿವಸ ಪ್ರತಿಯೊಂದು ವಸ್ತುವಿನ ಬೆಲೆಯೂ ಏರುತ್ತಲೇ ಇದೆ. ಇದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪತಕ್ಕ ವಿಷಯ. ಇಲ್ಲಿಗೆ ಕಳೆದ 60-70 ವರ್ಷಗಳಿಂದ ಇಂಥ ಬರ ಬಂದಿರಲಿಲ್ಲ. ಆದಕ್ಕೆ ಹಿಂದೆ ಧಾತೂ-ಈಶ್ವರನಾಮ ಸಂವತ್ಸರದಲ್ಲಿ ಹಿಂದಿನ ಕಾಲಿನಲ್ಲಿ ಬಂದಿದ್ದಂಥ ಬರ ಬಂದಿತ್ತು ಎಂದು ಜನ ಹೇಳುತ್ತಾರೆ. ವಾಸ್ತವಾಂಶಗಳು ಹೀಗಿದ್ದರೂ, ಅಯ್ಯೋ ಬಿಡಿರಿ, ಸುಮ್ಮನೆ ದೇಶದಲ್ಲಿ ಒಂದು ಪ್ಯಾನಿಕ್ಕನ್ನು, ಸ್ಕೇರ್ಸನ್ನು ಉಂಟು ಮಾಡಿ ವಾತಾವರಣವನ್ನು ಕಲುಷಿತವಾಗಿ ಮಾಡಲು ಕೆಲವರು ಕೂಗಾಡಿಬಿಟ್ಟರು ಎಂದು ಕೆಲವರು ಹೇಳುತ್ತಾರೆ. ಆದರೆ ಹಾಗೆ ಹೇಳತಕ್ಕ ಜನರು ಯಾರಿದ್ದಾರೋ ಅವರಿಗೆ ಜನತೆಯ ಸಂಪರ್ಕವಿಲ್ಲ ಎಂದು ಹೇಳಬಹುದು. ಅವರು ನನ್ನಂಥವರು ಯಾರಾದರೂ ಮಾತನಾಡುತ್ತಿರುವುದನ್ನು ಕೇಳಿಕೊಂಡು ಕೆಲವು ಅಭಿಪ್ರಾಯಗಳನ್ನು ರೂಢಿಸಿಕೊಂಡು ಇರತಕ್ಕ ಜನರೇ ಹೀಗೆ ಮಾತನಾಡತಕ್ಕದ್ದು. ಈಗ ದೇಶದಲ್ಲಿ ಕ್ಷಾಮ ಬಂದಿಲ್ಲವೆಂತಲೇ ಭಾವಿಸೋಣ. ಆದರೆ ಹಿಂದೆ ಅದೇ ಚಿತ್ರದುರ್ಗ ಜಿಲ್ಲೆಯಲ್ಲಿ ಇರತಕ್ಕ ಜನರು ಮೊದಲು ಏನು ಊಟ ಮಾಡುತ್ತಿದ್ದರು, ಈ ದಿವಸ ಏನು ಊಟ ಮಾಡುತ್ತಾರೆ ಎಂಬುದನ್ನು ನೋಡಿದರೆ ಇದು ತಾನೇ ಗೊತ್ತಾಗುತ್ತದೆ. ಈ ದಿವಸ ಅಕ್ಕಿ ಅಥವಾ ಜೋಳವನ್ನು ಕೊಂಡು ತಿನ್ನಲಿಕ್ಕೆ ಜನರಲ್ಲಿ ಹಣವಿಲ್ಲ, ಅಡವಿಟ್ಟು ಹಣವನ್ನು ತರಲು ಪಾತ್ರೆಗಳೂ ಇಲ್ಲ, ಮಾರಾಟ ಮಾಡಲು ದನಕರುಗಳಿಲ್ಲ. ಹೀಗಾಗಿ ಜೀವನಕ್ಕೆ ದಾರಿ ಕಾಣದಂಥ ಜನರು ದೇಶದಲ್ಲಿ ಬಹಳ ಇದ್ದಾರೆ. ದೇಶದಲ್ಲಿ ಬರಗಾಲ ಅನ್ನುವುದೇ

(ಶ್ರೀ ಎಸ್. ಗೋಪಾಲಗೌಡ)

ಇಲ್ಲದಿದ್ದರೂ ಆ ಗೋಪಾಲಗೌಡ ದೇಶದಲ್ಲಿ ತೀವ್ರ ಅಭಾವ ಬಂದಿದೆ, ಜನರಿಗೆ ಕುಡಿಯುವುದಕ್ಕೆ ನೀರಿಲ್ಲ, ತಿನ್ನುವುದಕ್ಕೆ ಅನ್ನವಿಲ್ಲ ಇಂಥ ಅಭಾವ ಉಂಟಾಗಿದೆ ಎಂಬುದಾಗಿ ದೇಶದಲ್ಲಿ ಒಂದು ಸ್ಕೇರ್ಸನ್ನು ಕ್ರಿಯೇಟ್ ಮಾಡುವುದಕ್ಕೆ ಏನೇನನ್ನೋ ಹೇಳಿದ್ದಾರೆ ಎಂದು ಹೇಳಬಹುದು. ಈ ದಿವಸ ಆ ಬಂಗಾಳದಲ್ಲೂ ಕ್ಷಾಮವಿಲ್ಲ ಅಂತಲೇ ಹೇಳುತ್ತಾರೇನೋ. ಹಿಂದೆ ಯಾವಾಗಲೋ ಕ್ಷಾಮದಿಂದ ಜನರು ರಸ್ತೆಗಳಲ್ಲೇ ಅಲ್ಲಲ್ಲೇ ಸತ್ತುಬಿದ್ದು ಹೆಣಗಳು ಓಡಾಡುತ್ತಿದ್ದ ಜನರ ಕಾಲಿಗೆ ತಗುಲುತ್ತಿದ್ದವಂತೆ. ಈಗಲೂ ಹೆಣಗಳು ಹಾಗೆ ಕಾಲಿಗೆ ತಗುಲಿದರೇನೇ ಈ ಜನರು ದೇಶದಲ್ಲಿ ಈ ದಿವಸ ಕ್ಷಾಮ ಬಂದಿದೆ ಎಂದು ಹೇಳುತ್ತಾರೇನೋ; ಅಂಥ ಜನರಿವರು. ಆದರೆ ಇಲ್ಲಿ ಈ ದಿವಸ ಸರ್ಕಾರ ಅನ್ನುವುದೊಂದಿದೆ. ಕೂಳಿಲ್ಲದ ಜನರು ಆಹಾರ ಮಂತ್ರಿಗಳಲ್ಲಿ ಹೋಗಿ ಆ ಮೈಲು ಜೋಳವನ್ನಾದರೂ ಕೊಡಿ ಎಂದರೆ ಅದನ್ನೂ ಸಹಾ ಸಕಾಲಕ್ಕೆ ಕೊಡುತ್ತಿಲ್ಲ. ಯಾರೋ ಒಬ್ಬರು ಒಬ್ಬ ಮನುಷ್ಯನು ಆಹಾರವಿಲ್ಲದೆ ಬರಿ ನೀರನ್ನೇ ಕುಡಿದುಕೊಂಡು 60 ದಿನಗಳು ಜೀವಿಸಬಲ್ಲನೆಂಬು ಹೇಳುತ್ತಿದ್ದರು. ಪೊಟ್ಟಿ ಶ್ರೀರಾಮುಲುರವರು ಸುಮಾರು ನಲವತ್ತು ದಿವಸದ ಮೇಲೆ ಉಪವಾಸ ಮಾಡಿ ಸತ್ತರು ಎಂದು ನಮಗೆ ಗೊತ್ತಾಗಿದೆ. ಬರೀ ನೀರು ಕುಡಿದೇ ಮನುಷ್ಯ ಬದುಕುವುದಿಲ್ಲ. ಹಳ್ಳಿಯಲ್ಲಿರುವ ಜನ ಹೊಟ್ಟೆ ತುಂಬಿಕೊಳ್ಳಲು ಮೂರು ನಾಲ್ಕು ದಿವಸಗಳಿಗಾಗುವಷ್ಟು ಗಂಜಿ ಕುಡಿದು ಜೀವಿಸಿರುತ್ತಾನೆ ಇಲ್ಲವೇ ಚುರುಮುರಿ ಕಾಳು ಅಕ್ಕಿ ಅಂತಹುದನ್ನು ತಿಂದುಕೊಂಡು ಮೂರು ಅಥವಾ ಆರು ತಿಂಗಳು ಬದುಕಬಹುದು. ಏನಾದರೂ ಒಂದು ರೀತಿಯಿಂದ ಅರೆ ಹೊಟ್ಟೆಗೋ ಕಾಲುಹೊಟ್ಟೆಗೋ ತಿಂದುಕೊಂಡು ಬದುಕಿರುತ್ತಾನೆ. ಇವೊತ್ತು ನಮ್ಮಲ್ಲಿ ಕಮ್ಯೂನಿಕೇಷನ್ನುಗಳು ಬಂದಿವೆ. ರಸ್ತೆಗಳು ಬಂದಿವೆ, ರೈಲುಗಳಿವೆ. ಹೀಗೆ ಎಲ್ಲಿಂದಲಾದರೂ ಸ್ವಲ್ಪ ಧಾನ್ಯ ತಂದು ತನ್ನ ಹೊಟ್ಟೆ ಹೊರೆದುಕೊಳ್ಳುವುದಕ್ಕೆ ಜನ ಪ್ರಯತ್ನಪಡುತ್ತಿದ್ದಾರೆ. ಹಾಗೂ ಜೀವನ ಮಾಡಿಕೊಳ್ಳುತ್ತಿದ್ದಾರೆ. ಈಗ ಅಂತಹ ಉತ್ಕಟ ಸ್ಥಿತಿ ಇಲ್ಲ. ಏನೋ ಒಂದು ರೀತಿಯಾದ ಸಾಮಾನ್ಯ ಪರಿಸ್ಥಿತಿ ಎಂದು ತಿಳಿಯುವುದಾದರೆ ಅದು ಬಹಳ ತಪ್ಪು. ಪರಿಸ್ಥಿತಿ ನಿಜವಾಗಿಯೂ ಬಹಳ ಉತ್ಕಟವಾಗಿದೆ. ಈಗಾಗಲೇ ನಮ್ಮ ಆಹಾರ ಮಂತ್ರಿಗಳು ಹಳ್ಳಿಗಳಿಗೆ ಕೊಡಲು ನಮ್ಮ ಅಕ್ಕಿ ಇಲ್ಲ ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಅವರಿಗೆ ಯಾವಾಗಲೂ ಪಟ್ಟಣಗಳಲ್ಲಿರುವ ಎಂದರೆ ಕೆ.ಜಿ.ಎಫ್.ನಲ್ಲಿರುವ ಅಥವಾ ಭದ್ರಾವತಿ ಹಾಗೂ ಧಾರವಾಡ ಜಿಲ್ಲೆಯಲ್ಲಿರುವ ಸುಮಾರು ಎರಡು ಲಕ್ಷ ಜನರಿಗೆ ಕೊಡುವ ಕಡೆ ಗಮನ ಅವರಿಗೆ ಇದೆಯೇ ಹೊರತು ಬಾಕಿ ಕಡೆಗೆ ಅವರ ದೃಷ್ಟಿ ಇಲ್ಲ. ಹಳ್ಳಿಗಾಡಿನಲ್ಲಿ ಬೆಳೆಯುವವರೂ ಕೂಡ ಮಳೆಯಾಗದೇ ಯಾವ ದವಸವನ್ನೂ ಬೆಳೆಯದೇ ಅವರಿಗೇ ತಿನ್ನುವುದಕ್ಕೆ ದವಸ ಇಲ್ಲ. ಇಂತಹುದರಲ್ಲಿ ಬೇಸಾಯ ಮಾಡುವ ಜನ ಕೂಲಿ ಇಲ್ಲದೇ ಇದ್ದಾಗ ಬೆಳೆಯುವವರ ಹತ್ತಿರ ಹೋಗಿ ಒಂದಿಷ್ಟು ಅಕ್ಕಿ ಕಾಳನ್ನು ಕೇಳಲು ಹೋದರೆ ಅವರು ನಿರ್ದಾಕ್ಷಿಣ್ಯವಾಗಿ ನಿಮ್ಮ ಆಹಾರಮಂತ್ರಿಗಳಾದ ಶ್ರೀಮಾನ್ ಜತ್ತಿಯವರೇ ನಮ್ಮ ಮನೆಗೆ ಬಂದು ಇದ್ದು ಬದ್ದುದನ್ನೆಲ್ಲಾ ತೆಗೆದುಕೊಂಡು ಹೋಗಿದ್ದಾರೆ. ನನ್ನಲ್ಲಿ ಒಂದುಕಾಳೂ ಇಲ್ಲ ಎಂದು ಧೈರ್ಯವಾಗಿ ಅವರ ಕೂಲಿಯಾಳುಗಳಿಗೆ ಕೂಡ ಹೇಳಿಬಿಡುತ್ತಾರೆ. ಅವರು ಯಾವ ದಯಾದಾಕ್ಷಿಣ್ಯಕ್ಕೂ ಒಳಗಾಗದೇ ಹೇಳುತ್ತಾರೆ. ಹಳ್ಳಿಗಳಲ್ಲಿರುವ ಜನರ ಸ್ಥಿತಿ ಸರ್ಕಾರಕ್ಕೆ ಇನ್ನೂ ಸರಿಯಾಗಿ ತಿಳಿದಿಲ್ಲ. ಏನೋ ಅರ್ಬನ್ ಏರಿಯಾದಲ್ಲಿ ಸುಮಾರು 50 ಲಕ್ಷದಷ್ಟು ಜನರಿರಬಹುದು. ಬಾಕಿ ಇರುವ ಸುಮಾರು ಎರಡು ಕೋಟಿ ಜನರೆಲ್ಲಾ ಬರೀ ಹಳ್ಳಿಗಳಲ್ಲೇ ಇದ್ದಾರೆ. ಇದಕ್ಕಾಗಿ ನಮ್ಮ ಸರಕಾರದವರು ಆಗಲೇ ಹೇಳಿದರು, ನಾವು ಬೆಳೆಯಾಗದೇ ಇರುವ ಕಡೆಗಳಲ್ಲಿ ಕಂದಾಯ ಮಾಫಿ ಮಾಡಿದ್ದೇವೆ. ಲೆವಿ ವಸೂಲು ಮಾಡುತ್ತಿಲ್ಲ ಎಂದು. ಇರುವ 19 ಜಿಲ್ಲೆಗಳಲ್ಲಿ 16 ಜಿಲ್ಲೆಗಳು ಕ್ಷಾಮ ಅಥವಾ ಅಭಾವದ ಪರಿಸ್ಥಿತಿಗೆ ಸಿಕ್ಕಿವೆ ಎಂದು ನಿಮ್ಮ ಲೆಕ್ಕದಿಂದಲೇ ಗೊತ್ತಾಗುತ್ತದೆ. ಇದಕ್ಕಾಗಿ ಅಲ್ಲಲ್ಲಿ ಪರಿಹಾರ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಇಲ್ಲಿ ಹೇಳಿದ್ದಾರೆ. ಹಿಂದೆ ಇಲ್ಲಿ ಸರಕಾರದವರು ಒಂದು ಸಾರಿ ಬಿದಿರಕ್ಕಿ ತಿನ್ನಲಿ ಎಂದು ಹೇಳಿದರು. ನಿಷ್ಕಾರಣವಾಗಿ ಬಡತನದ ಬೇಗೆಯಿಂದ ನರಳುತ್ತಿರುವ ಜನರ ಬಗ್ಗೆ ಇಷ್ಟು ಹಗುರವಾಗಿ ಮಾತನಾಡುವುದು ಸರಿಯಲ್ಲ. ಏನೋ ಯಾರೋ ವ್ಯಾಪಾರ ಮಾಡುವವರು ಒಂದು ಚೀಲ ಕಾಳನ್ನು ಮಾರುವಾಗ ಅದರಲ್ಲಿ ಬಿದಿರಕ್ಕಿಯನ್ನು ಹಾಗೂ ಸ್ವಲ್ಪ ಕಲ್ಲುಗಳನ್ನು ಸೇರಿಸಿ ದಾವಣಗೆರೆಗೆ ಕೊಂಡು ಹೋಗಿ ಮಾರಿ ಅದರಿಂದೇನೋ ಸ್ವಲ್ಪ ದುಡ್ಡು ಸಂಪಾದಿಸಿರಬಹುದು. ಅವರಿಗೇನು ಸಹಸ್ರಾರು ಚೀಲದಷ್ಟು ಬಿದಿರಕ್ಕಿ ಏನೂ ಸಿಗಲಿಲ್ಲ ಮತ್ತು ಅಲ್ಲಿ ಇದರಿಂದ ಲಾಭ ಪಡೆಯಬೇಕು ಎಂದು ಅದನ್ನು ಮಾರಲೂ ಹೋಗಲಿಲ್ಲ. ಸಾಗರದಿಂದ ನಮ್ಮ ಶಿವಮೊಗ್ಗಾ ಜಿಲ್ಲೆಯವರೆಗೆ ಸುಮಾರು 20-22 ಲಕ್ಷ ಬೇಸಾಯ ಮಾಡುವ ಜನರಿದ್ದಾರೆ. ಏನಾದರೂ ಮಳೆ ಬಂದರೆ ಬೆಳೆ ಮಾಡುವವರು ಇವರನ್ನು ಕೆಲಸಕ್ಕೆ ಕರೆದು ಕೆಲಸ ಮಾಡಿಸಿಕೊಳ್ಳುತ್ತಾರೆ. ಮಳೆಯೇ ಬರದೇ ಹೋದರೆ ಅವರೇನು ತಾನೇ ಮಾಡಲು ಆಗುತ್ತದೆ? ಮಳೆ ಬಂದಾಗ ಬಿತ್ತಲೂ ಹಾಗೂ ಹೂಟೆ ಹೊಡೆಯಲು ಅಥವಾ ಬೇರೆ

ಯಾವ ಕೆಲಸಕ್ಕಾದರೂ ಅವರನ್ನು ಕರೆದು ಕೆಲಸ ಮಾಡಿಸುತ್ತಾರೆ ಇಂತಹ ಕೂಲಿ ಜನ ನಮ್ಮ ಜಿಲ್ಲೆಯಲ್ಲಿ ನೋಡಿದರೆ ನೂರಕ್ಕೆ 25 ಜನ ಇರುತ್ತಾರೆ. ಈಗ ಮಳೆಯೇ ಇಲ್ಲದಿರುವಾಗ ಇವರಿಗೆ ಯಾರು ತಾನೆ ಕೆಲಸ ಕೊಡುತ್ತಾರೆ ? ಹೇಗೋ ಈ ಬಡ ಜನ ಜೀವ ಹಿಡಿದುಕೊಂಡು ಬದುಕಿದ್ದಾರೆ. ಇದು ಬಹಳ ಮುಖ್ಯವಾದ ಪ್ರಶ್ನೆ. ಹಿಂದೆ ಇಲ್ಲಿ ಸರಕಾರದವರು ಅಕ್ಕಿ ಮಾರುವ ರೇಟನ್ನು ಹೇಳುವಾಗ ಒಂದು ಕಿಲೋ ಅಕ್ಕಿಗೆ 50 ಪೈಸೆಯಂತೆ ಇದ್ದುದು ಈಗ ಹೆಚ್ಚೂ ಕಡಿಮೆ ಸರಕಾರದವರ ರೇಟೇ 99 ಪೈಸೆವರೆಗೆ ಬಂದಿದೆ. ಹಾಲಿ ಇವೊತ್ತು ಬೆಂಗಳೂರು ಪೇಟೆಯಲ್ಲಿ ಸಾಮಾನ್ಯವಾದ ಅಕ್ಕಿ ಒಂದು ಕಿಲೋ ಅಕ್ಕಿಗೆ ಎರಡು ರೂಪಾಯಿನಂತೆ ಇದೆ. ಅದರಲ್ಲೂ ಪಲಾವ್ ಮಾಡುವುದಕ್ಕಾಗಿ ಉಪಯೋಗಿಸುವ ಡೆಹರಾಡೂನು ಅಕ್ಕಿ ಹಾಗೂ ಭಾನುಮತಿ ಅಕ್ಕಿ ಬಹುಶಃ ಒಂದು ಕೆ. ಜಿ. ಗೆ ಮೂರುವರೆಯಿಂದ ನಾಲ್ಕು ರೂಪಾಯಿಗಳವರೆಗೆ ಮಾರಾಟವಾಗುತ್ತಿರಬಹುದು. ಐದು ರೂಪಾಯಿ ಅದರೂ ಪರವಾಗಿಲ್ಲ ಅವರು ಮಾರುತ್ತಿದ್ದಾರೆ. ಅದನ್ನು ಬೇಕಾದ ಜನ ಕೊಂಡುಕೊಳ್ಳುತ್ತಿದ್ದಾರೆ. ಇದು ಬೇರೆ ವಿಚಾರ. ಮಾನ್ಯ ಆಹಾರ ಮಂತ್ರಿಗಳಾದ ಜತ್ತಿಯವರು ಪ್ರೊಕ್ಯೂರುಮೆಂಟು ಮಾಡಬೇಕೆಂದು ಎಲ್ಲರ ಮನೆಗಳಿಗೂ ನುಗ್ಗಿ ತರಬೇಕೆಂದು ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನಂತೆ ಬೆಳೆದಿರುವವನ ಮನೆಯ ಕಣಜವನ್ನು ಪೋಲೀಸರು ಹೋಗಿ ಬಿಚ್ಚಿ ಅದರಲ್ಲಿರುವ ಕಾಳನ್ನು ಲೆಕ್ಕ ಮಾಡಿ ಅಳೆದುಕೊಂಡು ಬರುತ್ತಿದ್ದಾರೆ. ಅವರು ಮಾಡುವ ಲೆಕ್ಕಗಳೇ ಒಂದು ತರಹ ಹೊಸ ನಮೂನೆಯ ಲೆಕ್ಕ. ಇದರಿಂದ ಜನರಲ್ಲಿ ಹಾಹಾಕಾರವಾಗಿ ಒಂದು ತರಹದ ವಿಚಿತ್ರ ಪರಿಸ್ಥಿತಿ ಹಳ್ಳಿಗಳಲ್ಲಿ ಉಂಟಾಗಿದೆ. ಇದಲ್ಲದೆ ಆಹಾರ ಕಾರ್ಪೊರೇಷನ್ ಎಂದು ಮಾಡಿರುವವರ ಮೂಲಕ ನೋಡಿದರೆ ಅದೊಂದು ವಿಚಿತ್ರವಾಗಿ ಕಂಡು ಬರುತ್ತದೆ. ಈ ಕಾರ್ಪೊರೇಷನ್ನಿನವರು ಅಕ್ಕಿಯನ್ನು ರೀಸರ್ಚು ಮಾಡಿ ಎಂದರೆ, ಸಂಶೋಧನೆಯನ್ನು ಮಾಡಿ ಇದರಲ್ಲಿ ಎಷ್ಟು ಕಾಳು ಅಕ್ಕಿ ಚೆನ್ನಾಗಿದೆ ಎನ್ನುವುದನ್ನು ನೋಡುತ್ತಾರೆ. ಹೀಗೆ ಮಾಡಿ ನಮ್ಮ ರಾಜ್ಯದಲ್ಲಿ ಸುಮಾರು ಶೇಕಡಾ ಎಪ್ಪತ್ತರಷ್ಟು ಅಕ್ಕಿ ಕಾಳು ಉಪಯೋಗಿಸಲು ಲಾಯಕ್ಕಾಗಿಲ್ಲ ಎಂದು ಇದನ್ನು ಕಂಡೆಮ್ ಬೇರೆ ಮಾಡಿದರು. ಇಂತಹ ಪರಿಸ್ಥಿತಿ ಬೇರೆ ಇತ್ತು. ಇವೆಲ್ಲಾ ಮಾಡಿ ಪ್ರೊಕ್ಯೂರುಮೆಂಟು ಎಂದು ಮಾಡಿದರು. ಇಲ್ಲಿ ಸರ್ಕಾರ ಕೊಟ್ಟಿರುವ ಒಂದು ನೋಟ್‌ನಂತೆ ನಮ್ಮ ಶಿವಮೊಗ್ಗಾ ಜಿಲ್ಲೆ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಂತಹ ಆಹಾರದ ಹಾಹಾಕಾರವೇನಿಲ್ಲ ಎಂದು ಹೇಳಿದ್ದಾರೆ. ಸರಕಾರ ಆಹಾರದ ವಿತರಣೆ ಬಗ್ಗೆ ಈ ಭಾಗಗಳಲ್ಲಿ ಸರಿಯಾಗಿ ಕಾರ್ಯಕ್ರಮ ತೆಗೆದುಕೊಂಡಿಲ್ಲ.

ಸ್ವಾಮೀ ಯಾರೂ ಇಲ್ಲಿ ಸಾಯುವ ಪರಿಸ್ಥಿತಿಯಲ್ಲಿ ಇಲ್ಲ ಎಂದು ನಮ್ಮ ಪಂಚಾಯತಿ ಖಾತೆಯ ಮಂತ್ರಿಗಳು ಇಲ್ಲಿ ಹೇಳಿದರು. ನಮ್ಮ ರಾಜ್ಯದಲ್ಲಿ ಫ್ಯಾಮಿನ್ ಕೋಡ್ ಎಂದು ಒಂದು ಪುಸ್ತಕ ಇದೆ. ಇದನ್ನು ಮಾನ್ಯ ಆಹಾರ ಮಂತ್ರಿಗಳೂ ಕೂಡ ಓದಿರಬಹುದು. ಇದು ಯಾವಾಗಿನಿಂದ ಬಂದಿದೆ ಎಂದರೆ ಹಿಂದೆ ತಾಂತ್ಯಾಟೋಪಿಯನ್ನು ಗಲ್ಲಿಗೆ ಹಾಕಿದರಲ್ಲ ಆ ಕಾಲದಿಂದಲೂ ಇಲ್ಲಿ ಬಂದಿದೆ. ಇದರ ತಿದ್ದುಪಡಿಯೇನೂ ಇನ್ನೂ ಆಗಲಿಲ್ಲ. ಕೇಂದ್ರ ಸರಕಾರದವರು ಕೂಡ ಇದನ್ನೇ ಜಾರಿಯಲ್ಲಿ ತರುತ್ತಿದ್ದಾರೆ. ಇಂತಹ ಹಳೇ ಕಾಲದ ಫ್ಯಾಮಿನ್ ಕೋಡುಗಳು ಹಾಗೂ ಕೆ. ವಿ. ಮ್ಯಾನ್ಯುಯಲ್ ಇವು ಕೂಡ ನಮ್ಮ ಆರ್‌ಚೀವ್ಸ್‌ನಲ್ಲಿ ಇವೆ. ಇದರಲ್ಲಿ ಸ್ಟಾರ್ವೇಷನ್ ಎಂದರೆ ಏನು ಎನ್ನುವುದನ್ನು ಡಿಫೈನು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಸ್ಟಾರ್ವೇಷನ್ ಡೆತ್ಸ್ ನಮ್ಮ ದೇಶದಲ್ಲಿ ಆಗುವುದಿಲ್ಲ. ಆಗುವುದೂ ಸಾಧ್ಯವಿಲ್ಲ. ಸತ್ತವನ ಹೊಟ್ಟೆಯನ್ನು ಯಾರಾದರೂ ಬಗೆದು ನೋಡಿದರೆ ಅದರಲ್ಲಿ ಏನಾದರೂ ಫೀಕಲ್ ಮೆಟೀರಿಯಲ್ ಇದ್ದೇ ಇರುತ್ತದೆ. ಊಟ ಮಾಡಿದ ಮನುಷ್ಯ ಎರಡು ಮೂರು ಸಲ ಪಾಯಿಖಾನೆ ಮಾಡುತ್ತಾನೆ ಅದಕ್ಕಾಗಿ ಶೌಚವನ್ನು ಮಾಡಿಕೊಳ್ಳುತ್ತಾನೆ. ಎರಡು ಮೂರು ದಿನ ಅನ್ನ ಇಲ್ಲದಿದ್ದರೆ ಅವನ ಹೊಟ್ಟೆಯಲ್ಲಿ ಏನುತಾನೆ ಇರುತ್ತದೆ ? ಡಾಕ್ಟರು ಆಪರೇಷನ್ ಮಾಡಿದಾಗ "There is something in it" ಎಂದು ಬರೆಯುತ್ತಾರೆ. ಆತ್ಮಹತ್ಯೆಯಿಂದ ಸತ್ತರೆ ಅದು ಬೇರೆ. ಗಂಜಿಯಲ್ಲಿ ವಿಷ ಬೆರಸಿ ಹಾಕಿ ಕೊಟ್ಟರೆ ಅದು ಸೂಯಿಸೈಡ್ ಆಗುತ್ತದೆ ಎಂದು ಸೆಕ್ಷನ್ 302 ರಂತೆ ಕೇಸು ಹಾಕುತ್ತಾರೆ. ಗಂಜಿ ಕುಡಿದವರು ಬದುಕುತ್ತಾರೆ. ವಿಷ ಹಾಕಿದವರ ಮೇಲೆ ಕೇಸು ಹಾಕುತ್ತಾರೆ. ಇದನ್ನು ಹೇಗೆ ಕೋರ್ಟ್‌ನಲ್ಲಿ ನೋಡುತ್ತಾರೋ ನೋಡಬೇಕು. ಅಂತೂ ಹಳೆಯಕಾಲದ ಫ್ಯಾಮಿನ್ ಕೋಡ್‌ನ್ನು ಇನ್ನೂ ಹಾಗೇ ಇಟ್ಟಿದ್ದಾರೆ. ಕ್ಷಾಮ ಬಂದರೆ, ಅಭಾವ ಪರಿಸ್ಥಿತಿ ಬಂದರೆ ಇದು ರಾಜ್ಯಕ್ಕೇ ಸೇರಿದ ಸ್ಟೇಟ್ ಸಬ್‌ಜೆಕ್ಟ್ ಎಂದು ಅಷ್ಟಕ್ಕೇ ಬಿಟ್ಟು ಬಿಡುತ್ತಾರೆ.

ಇದು ಸ್ಟೇಟ್ ಸಬ್ಜೆಕ್ಟ್ ಆಗುವುದು ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ಇದರ ಜೊತೆಗೆ ಒಂದು ಆಶ್ವಾಸನೆ ಕೊಡುತ್ತಾರೆ, ಏನೆಂದರೆ, ಎಲ್ಲಾದರೂ ಕ್ಷಾಮ ಬಂದರೆ, ಅಭಾವ ಪರಿಸ್ಥಿತಿ ಉಂಟಾದರೆ ನಾವು ಯಾರನ್ನೂ ಸಾಯುವುದಕ್ಕೆ ಬಿಡುವುದಿಲ್ಲ ಎಂದು. ಅಲ್ಲದೆ ಅಂತಹ ಸ್ಥಳಗಳಿಗೆ ಸಕಾಲದಲ್ಲಿ ಆಹಾರಧಾನ್ಯಗಳನ್ನು ಒದಗಿಸಿ ಜನರನ್ನು ರಕ್ಷಣೆ ಮಾಡುತ್ತೇವೆ, ಇದು ನಮ್ಮ ಆದ್ಯ

(ಶ್ರೀ ಎಸ್. ಗೋಪಾಲಗೌಡ)

ಕರ್ತವ್ಯಗಳಲ್ಲಿ ಒಂದು ಎಂದು ಹೇಳಿದ್ದಾರೆ. ದೇಶದಲ್ಲಿ ಕ್ಷಾಮಢಾಮರಗಳು, ಖಾಯಿಲೆಗಳು ಬಂದರೆ ನಾವು ಜನರನ್ನು ರಕ್ಷಿಸುತ್ತೇವೆ, ಸಾಯಲು ಬಿಡುವುದಿಲ್ಲವೆಂದು ಹೇಳಿದ್ದಾರೆ. ಆದರೆ ಆ ಮಾತನ್ನು ಉಳಿಸಿಕೊಳ್ಳುವುದಕ್ಕೆ ಕೃತಿಯಲ್ಲಿ ಏನನ್ನೂ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಯಾರು ಸತ್ತರೂ ಕೂಡ ಹೊಟ್ಟೆಗಿಲ್ಲದೆ ಸತ್ತಿಲ್ಲವೆಂದು ಹೇಳುವ ಒಂದು ತತ್ವ ಈ ಸರ್ಕಾರಕ್ಕಿದೆ. ಫ್ಯಾಮಿನ್ ಕೋಡನ್ನು ಪುನರ್ ವಿಮರ್ಶೆಮಾಡಿ ಸ್ವಲ್ಪ ತಿದ್ದುಪಡಿ ಮಾಡಬೇಕು, ಇಲ್ಲದಿದ್ದರೆ ಅದನ್ನು ಬಿಸಾಡಬೇಕು. ಎಷ್ಟು ದಿವಸ ಉಪವಾಸವಿದ್ದು ಸತ್ತರೆ ಅದನ್ನು ಹೇಗೆ ತೀರ್ಮಾನಮಾಡಬೇಕು ಎಂಬುದರ ಬಗ್ಗೆ ಏನಾದರೂ ಒಂದು ನಿರ್ಧಾರ ಮಾಡಬೇಕು. ಹಾಲಿನ ಪುಡಿಯನ್ನು ಬಾಣಂತಿಯರಿಗೆ ಮಕ್ಕಳಿಗೆ ಕೊಡುತ್ತಿದ್ದೇವೆಂದು, ಖಾಯಿಲೆ ಇರುವವರಿಗೆ ವಿಟಮಿನ್ ಟ್ಯಾಬ್‌ಲೆಟ್ಸ್ ಕೊಡುತ್ತಿದ್ದೇವೆಂದು ಹೇಳಿದ್ದಾರೆ. ಇವರು ಮಾಡುವ ಹಂಚಿಕೆ ಯಾರಿಗೆ ಮುಟ್ಟುತ್ತದೆ, ಯಾರಿಗೆ ಮುಟ್ಟುವುದಿಲ್ಲ ಎನ್ನುವುದು ಗೊತ್ತಿಲ್ಲ. ನಮ್ಮಲ್ಲಿ ಒಂದು ಗಾದೆ ಇದೆ, ಯಾರಾದರೂ ಸತ್ತರೆ, ಆ ಹೆಣದ ಬಾಯಿಗೆ ಸ್ವಲ್ಪ ಬೆಣ್ಣೆ ಹಾಕುತ್ತಾರೆ. ಕೆಲವರು ಬೆಣ್ಣೆ ದಂಡವಾಗುತ್ತದೆಂದು ಅದನ್ನು ಹೆಣದ ಬಾಯಿಂದ ತೆಗೆದುಕೊಂಡು ತಿನ್ನುತ್ತಾರೆ. ಅಂತಹವರನ್ನು ಹೆಣದ ಬಾಯಿಂದ ಬೆಣ್ಣೆ ತೆಗೆದು ತಿನ್ನುವವರು ಎಂದು ಹೇಳುತ್ತಾರೆ. ಮಕ್ಕಳಿಗಾಗಿ ಹಾಲಿನ ಪುಡಿಯನ್ನು ಯಾವುದೋ ದೇಶದವರು ಕೊಡುತ್ತಾರೆ. ಅದು ಅಂಗಡಿಗಳಲ್ಲಿರುತ್ತದೆ. ಜಾಸ್ತಿ ದರಕ್ಕೆ ಅದನ್ನು ಮಾರಾಟ ಮಾಡುತ್ತಿರುತ್ತಾರೆ. ಯಾರೋ ಹೇಳಿದರು, ಬೇರೆ ದೇಶದ ಕೆಂಪು ಜೋಳ ಅಂಗಡಿಯಲ್ಲಿ ಸಿಗುತ್ತದೆಂದು. ಜತ್ತಿಯವರ ಸಿ. ಐ. ಡಿ. ಗಳು ಈ ಒಂದು ಕೇಸನ್ನು ಹಿಡಿದಿದ್ದಾರೆ.

> "The C.I.D. Crime Branch Police on Thursday seized 130 bags wheat and wheat products worth 8,000 from a merchant in New Tharagupet, according to the police, the merchant did not have the dealers' licence."

ಇವತ್ತು ಮಧ್ಯಾಹ್ನ ಒಂದು ವರ್ತಮಾನ ಬಂತು. ಅಂಗಡಿ ಮುಂದೆ ದಿನಸಿಗಳ ಬೆಲೆಯನ್ನು ಹಾಕಿರಲಿಲ್ಲವೆಂದು 11 ಜನರಿಗೆ ಮ್ಯಾಜಿಸ್‌ಟ್ರೇಟ್ ಕೋರ್ಟಿನಲ್ಲಿ 25 ರೂಪಾಯಿಗಳ ದಂಡವನ್ನು ಹಾಕಿದ್ದಾರೆ ಎಂದು, ಸರ್ಕಾರದವರು ಕೊಟ್ಟ ಆಹಾರಧಾನ್ಯಗಳನ್ನು ದುರುಪಯೋಗಪಡಿಸಿದವರಿಗೆ ಈ ರೀತಿ ಸರ್ಕಾರದವರು ದಂಡವನ್ನು ವಿಧಿಸುತ್ತಿದ್ದಾರೆಂದು ಹೇಳುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಪಂಜಾಬಿನವರು ಮಾಡಿದಹಾಗೆ ಮಾಡುತ್ತೇವೆಂದು ನಮ್ಮ ಮುಖ್ಯ ಮಂತ್ರಿಗಳು ಪ್ರತಿ ಭಾಷಣದಲ್ಲೂ ಹೇಳುತ್ತಿದ್ದಾರೆ: ನೀವು ಧಾರಣೆಗಳನ್ನು ಏರಿಸಿದರೆ ವ್ಯಾಪಾರಿಗಳ ಕುಲ ಇಲ್ಲದ ಹಾಗೆ ಮಾಡುತ್ತೇನೆಂದು ಸಹ ಹೇಳಿದ್ದಾರೆ. ಇವರ ಬಾಯಿ ಮಾತಿಗೆ ಯಾವ ವ್ಯಾಪಾರಿಗಳೂ ಸಹ ಹೆದರಿಲ್ಲ. ಅವರೇ ಹೇಳುತ್ತಾರೆ. ವ್ಯಾಪಾರಂ ದ್ರೋಹಚಿಂತನಂ ಎಂದು. ನಮ್ಮವರು ಬಂದರು ಎಂದು ಕೊಟ್ಟು ಬಿಡುವುದಕ್ಕಾಗುದಿಲ್ಲ, ಈಗ ಕ್ಷಾಮ ಬಂದಿದೆ, ಕಡಿಮೆ ದರಕ್ಕೆ ಕೊಡುವುದಕ್ಕಾಗುವುದಿಲ್ಲ, ಬೇಕಾದರೆ ಶ್ರೀಮಾನ್ ಜತ್ತಿಯವರ ಹತ್ತಿರ ಹೋಗಿ ತೆಗೆದುಕೊಂಡು ಬನ್ನಿ ಎಂದು ವ್ಯಾಪಾರಸ್ಥರು ಹೇಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಯವರು ವ್ಯಾಪಾರಸ್ಥರನ್ನು ಎದುರಿಸಿದ್ದೂ ಎದುರಿಸಿದ್ದೇ. ಅವರು ಮಾಡುವುದನ್ನು ಮಾಡುತ್ತಲೇ ಇದ್ದಾರೆ. ಇವರಿಗೆ ಒಂದು ಹೆಚ್ಚು ಇದೆ, ಅಕ್ಕಿಯಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎನ್ನುವಹಾಗೆ, ವ್ಯಾಪಾರಸ್ಥರು ನಮ್ಮ ಕಷ್ಟಕಾಲದಲ್ಲಿ ಸಹಾಯ ಮಾಡುತ್ತಾರೆ ಎಂದು ಇವರು ತಿಳಿದುಕೊಂಡಿದ್ದಾರೆ.

ಶ್ರೀ ಕೆ. ಲಕ್ಕಪ್ಪ.—ಎಲೆಕ್ಷನ್ ಹತ್ತಿರ ಬಂತು.

ಶ್ರೀ ಎಸ್. ಗೋಪಾಲಗೌಡ.—ನಮಗೂ ಹಣ ಬೇಕು, ಅವರಿಗೆ 14 ಲಕ್ಷ ಆದರೆ ನಮಗೆ 2 ಲಕ್ಷವಾದರೂ ಬೇಕು. ಸರ್ಕಾರದವರಿಗೆ ಟ್ರೆಜರಿಯೇ ಅವರ ವಶದಲ್ಲಿದೆ. ಇನ್ನು ಅವರಿಗೆ ಹಣದ ಪ್ರಶ್ನೆಯಲ್ಲಿ ಬಂತು? ಆಹಾರ ಧಾನ್ಯಗಳನ್ನು ಹಂಚುವ ವಿಷಯದಲ್ಲಿ ಶ್ರೀಮಾನ್ ಜತ್ತಿಯವರು ಅರ್ಥಶಾಖೆಯನ್ನು ಬಿಟ್ಟು ಆಹಾರ ಶಾಖೆಯನ್ನು ವಹಿಸಿಕೊಂಡರು. ಅವರಿಗೆ ಯಾವ ಕೆಲಸ ಕೊಟ್ಟರೂ ಸಹ ಚೆನ್ನಾಗಿ ಮಾಡುತ್ತಾರೆ. ಈ ಶಾಖೆಯನ್ನು ಅವರು ವಹಿಸಿಕೊಂಡಮೇಲೆ, ಬಹಳ ಕಷ್ಟಪಟ್ಟು ಕೆಲವು ಕೇಸ್‌ಗಳನ್ನು ತಾವೇ ಹಿಡಿದು ಕೇಸ್ ಹಾಕಿಸಿದರು. ಅವರಿಗೆ ಏನು ದಂಡ ಹಾಕಿದರು ಎಂಬುದು ಗೊತ್ತಾಗಲಿಲ್ಲ. ಬಹುಶಃ ಅವರುಗಳು ಒಂದಲ್ಲಾ ಒಂದು ವಿಧದಲ್ಲಿ ಸಂಬಂಧವಾಗಬೇಕೆಂದು ಬಿಟ್ಟುಬಿಟ್ಟಿರಬೇಕು. ರಮಣಾ ರೈಸ್ ಮಿಲ್ ಎಂದು ಶಿರಾಳಗುಪ್ಪದಲ್ಲಿದೆ. ಆ ಮಿಲ್‌ನಲ್ಲಿ ಸರ್ಕಾರದವರು 720 ಕ್ವಿಂಟಾಲ್ ಬತ್ತವನ್ನು ಇಟ್ಟಿದ್ದರು, ಅದಕ್ಕೆ ಸರ್ಕಾರದವರು ಒಂದು ಬೀಗ ಹಾಕಿದ್ದರು, ಮಾಲೀಕರು ಒಂದು ಬೀಗ ಹಾಕಿದ್ದರು. "On one fine morning

he gave a complaint to the police stating that 720 quintals of rice has been stolen." ನಂತರ ಸರ್ಕಾರದವರಿಗೆ ತಿಳಿಸಿದ, ನನಗೆ ಸರ್ಕಾರದಿಂದ ಹಣ ಬರಬೇಕಾಗಿದೆ, 720 ಕ್ವಿಂಟಾಲ್ ಬತ್ತದ ರೇಟನ್ನು ಹಿಡಿದುಕೊಂಡು ಬಾಕಿ ಹಣ ಕೊಡಿ ಎಂದು. ಆ ಕೇಸ್ ಏನಾಯಿತೋ ಗೊತ್ತಿಲ್ಲ, ಮಾನ್ಯ ಶ್ರೀ ಜತ್ತಿಯವರಿಗೆ ಗೊತ್ತಿರಬಹುದು. ಇನ್ನು ಕಾರ್ಪೊರೇಷನ್ ಲಾರಿಯಲ್ಲಿ ಕಮಲಾಕ್ಷಪುರದಿಂದ ಬಂದಂತಹ ಮಾಲು ಸರ್ಕಾರಕ್ಕೆ ಮುಟ್ಟಿತೋ ಇಲ್ಲವೋ ಗೊತ್ತಿಲ್ಲ.

ಶ್ರೀ ಬಿ. ಡಿ. ಜತ್ತಿ (ಆಹಾರ ಮಂತ್ರಿಗಳು).—ಸರ್ಕಾರಕ್ಕೆ ಮುಟ್ಟಿದೆ.

5-00 P.M.

ಶ್ರೀ ಎಸ್. ಗೋಪಾಲಗೌಡ.—ಇವು ಕೆಲವು ಉದಾಹರಣೆಗಳು. ಸರ್ಕಾರ ಇಂತಹ ಸನ್ನಿವೇಶದಲ್ಲಿಯೂ ಕೂಡ ತಾನು ಏನನ್ನು ಮಾಡಬೇಕು, ಯಾವ್ಯಾವ ಕರ್ತವ್ಯಗಳನ್ನು ಮಾಡಬೇಕು ಎನ್ನುವುದನ್ನೂ ಕೂಡ ಮನಃಪೂರ್ವಕವಾಗಿ ಸಮರ್ಥವಾಗಿ ನಡೆಸುವಂತಹ ಶಕ್ತಿಯನ್ನು ಪಡೆಯಬೇಕು.

ಇನ್ನು ಸಂಗ್ರಹವಾದಂಥ ಆಹಾರಧಾನ್ಯಗಳನ್ನೂ ಕೂಡ ಸರಿಯಾದ ರೀತಿಯಲ್ಲಿ ವಿತರಣೆ ಮಾಡುತ್ತಾ ಇಲ್ಲ. ರೈತರಿಗೆ ಕೊಡುವ ಬೆಲೆ ಕಡಮೆ. ಲಾಭಾಂಶ ಮತ್ತು ಇತರ ದರಗಳೇನೋ ಜಾಸ್ತಿಯಾಗಿದೆ. ಕೊಂಡು ತಿನ್ನುವವರಿಗೆ ಹಾಗೆಯೇ ಬಿಟ್ಟಿದ್ದರೆ ಎಷ್ಟಕ್ಕೆ ಆಹಾರ ಧಾನ್ಯಗಳು ಸಿಗುತ್ತಿತ್ತೋ ಆ ಮಟ್ಟಕ್ಕೆ ಬಿಟ್ಟಿದ್ದರೆ ಚೆನ್ನಾಗಿತ್ತು. ಮೊನ್ನೆತಾನೇ ಯೋಜನಾ ಆಯೋಗದ ಸದಸ್ಯರೊಬ್ಬರಾದ ಶ್ರೀಮಾನ್ ವಿ. ಕೆ. ಆರ್. ವಿ. ರಾವ್ ಅವರು ನಮ್ಮ ರಾಜ್ಯಕ್ಕೆ ಬಂದಿದ್ದರು. ಅವರು ಒಂದು ಮಾತನ್ನು ಹೇಳಿದರು. ಒಂದು ರಾಷ್ಟ್ರಕ್ಕೆ ಅಥವ ಜನಾಂಗಕ್ಕೆ ಅನ್ನಕ್ಕಿಂತ ಮಾನ ದೊಡ್ಡದು ಎಂದೂ ಮಾನ ಮಾನವ ಎಂದೂ ಕರೆಯುತ್ತಿದ್ದರು. ಮಾನ ಇರತಕ್ಕವನು, ಮರ್ಯಾದೆ ಇರತಕ್ಕವನು ಎಲ್ಲಾದರೂ ಬಿದ್ದಿರತಕ್ಕಂಥ ಹಣವನ್ನು ಮುಟ್ಟುತ್ತಾನೆಯೆ? ಹೋಟಲಿನಲ್ಲಿ ಬಿಸಾಡತಕ್ಕ ಎಲೆಗಳಲ್ಲಿಯೂ ಊಟ ಮಾಡತಕ್ಕಂಥ ಜನಗಳನ್ನು ನಾವು ಇಂದು ನೋಡುತ್ತಿದ್ದೇವೆ. ಇವತ್ತು ಅಮೇರಿಕಾದಿಂದ ಸಹಾಯ ಅಥವಾ ಪರದೇಶಗಳಿಂದ ನಮಗೆ ಆಹಾರ ಬಂದು ನಮ್ಮ ಹೊಟ್ಟೆ ತುಂಬುವ ಅವಕಾಶವನ್ನು ನಾವು ಮಾಡಿಕೊಂಡು ಬಂದಿದ್ದೇವೆ. ಇದು ಮಾನಕ್ಕೆ ಮತ್ತು ಗೌರವಕ್ಕೆ ಧಕ್ಕೆ ತರುತ್ತದೆ. ಸರ್ಕಾರ ನಡೆಸತಕ್ಕವರು ಇದನ್ನು ಕೈಬಿಡುವ ವಿಚಾರವನ್ನು ಮಾಡಬೇಕು ಎಂಬುದಾಗಿ ಹೇಳಿದರು. ಅವರು ಒಂದುಕಡೆ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ :

> "Let us suppose that India which is importing 750 million dollar worth of United States Foodgrains this year continues to require 500 million dollar worth for another five years."

* * *

ಇದನ್ನು ಒಂದು ಡಿಬೇಟ್‌ನಲ್ಲಿ :

> "If one takes into account interest payment at the new three per cent rate fixed by the (American) Senate including those during ten years grace period allowed under the Bill, New Delhi would be paying back 83 million dollars as its 1977 food instalment and 150 million dollars by 1982."

ಇನ್ನೊಂದು ವಾಕ್ಯವಿದೆ. ಅದನ್ನು ಓದುತ್ತೇನೆ :

> "Even by the year 2000 India would be paying back 105 million dollars per year on its food debt."

ಇಂಥಾದ್ದನ್ನು ನಾವು ಕೇಳಿಸಿಕೊಂಡಿದ್ದರೂ ನಾವು ಹೇಗೋ ಹೊಟ್ಟೆ ಹೊರಕೊಳ್ಳುತ್ತಿದ್ದೇವೆ. ಮುಂದಿನ ಪೀಳಿಗೆಯನ್ನು ಬಲಿಕೊಟ್ಟು ರಾಷ್ಟ್ರದ ಘನತೆ ಗೌರವಗಳನ್ನು ಒತ್ತೆ ಇಟ್ಟು ಇಷ್ಟು ಅವಮಾನ ಸ್ಥಿತಿಯಲ್ಲಿ ನಾವಿದ್ದರೂ ನಮ್ಮ ಸರ್ಕಾರ ನಡೆಸುವವರು ಮಾತ್ರ ಕಂಡ ಕಂಡ ಸ್ಥಳಗಳಲ್ಲೆಲ್ಲಾ ಹೇಳಿಕೆಗಳನ್ನು ಕೊಡುವುದರಲ್ಲಿ, ತಂತಮ್ಮ ಅಧಿಕಾರಗಳನ್ನು ಉಳಿಸಿಕೊಳ್ಳುವುದರಲ್ಲಿ ಮಗ್ನರಾಗಿದ್ದಾರೆ. ಇದು ಈ ದೇಶದ ದುರಾದೃಷ್ಟ. ಬಹುಶಃ ಈ ಪರಿಸ್ಥಿತಿಯನ್ನು ಕಾಂಗ್ರೆಸ್ಸನ್ನು ತೊಡೆದುಹಾಕುವುದರ ಜೊತೆಗೆ ಖಂಡಿತವಾಗಿ ತೊಡೆದುಹಾಕಬಹುದು. ಇದು ನಮ್ಮ ದುರಾದೃಷ್ಟವೆಂದೇ ಹೇಳಬೇಕು.

(ಶ್ರೀ ಎಸ್. ಗೋಪಾಲ ಗೌಡ)

ಸರ್ಕಾರದವರು ಭುವನೇಶ್ವರ ಕಾಂಗ್ರೆಸ್ ಅಧಿವೇಶನದಲ್ಲಿ ಹೇಳಿದರು. ಆಹಾರ ಧಾನ್ಯಗಳ ವ್ಯಾಪಾರವನ್ನೆಲ್ಲಾ ಸರ್ಕಾರವೇ ತೆಗೆದುಕೊಳ್ಳುತ್ತದೆ, ಏನೇನೂ ಗಾಬರಿಗೆ ಅವಕಾಶವಿಲ್ಲವೆಂದು. ಆವಡಿ ಮತ್ತು ನಾಗಪುರ ಕಾಂಗ್ರೆಸ್ ಅಧಿವೇಶನ ನಡೆದಾಗ ಹೆಚ್ಚು ಕಡಿಮೆ ಯಾವರೀತಿ ಇತ್ತೋ ಅದೇ ರೀತಿ ಈಗಲೂ ಹಾಗೆಯೇ ಇದೆ. ಏನೂ ಬದಲಾವಣೆಯೇ ಕಂಡುಬರುತ್ತಾ ಇಲ್ಲ. ಈ ಮೂರು ಪಂಚವಾರ್ಷಿಕ ಯೋಜನೆಗಳಲ್ಲಿ ಸಮಾಜೀಕರಣ ಮಾಡುತ್ತೇವೆಂದು ಘೋಷಣೆ ಮಾಡಿದರು. ಆ ಘೋಷಣೆಯನ್ನು ಪ್ರತಿಪಾದಿಸಿದವರು. ಈಗಿರತಕ್ಕ ಶ್ರೀ ಸುಬ್ರಹ್ಮಣ್ಯಂ ಅವರು ಒಂದು ಸಮಿತಿಯನ್ನು ಮಾಡಿದರು. ಸರ್ಕಾರದವರೇ ಮಿಲ್ಲುಗಳನ್ನು ಹಾಕುತ್ತೇವೆಂದು ಹೇಳಿದರು. ಆ ಆಲೋಚನೆ ಅಲ್ಲಿಯೇ ಹೋಯಿತು. ಈಗ ಗೊಬ್ಬರಕ್ಕೂ ಕೂಡ ಅಮೇರಿಕಾದವರ ಅಥವಾ ಯುಗೊಸ್ಲಾವಿಯಾ ಹತ್ತಿರ ಹೋಗಬೇಕಾಗಿದೆ, ಇಲ್ಲಿ ಸಾಕಷ್ಟು ಗೊಬ್ಬರವನ್ನೂ ಮತ್ತು ಸಾಕಷ್ಟು ಬೀಜಗಳನ್ನು ಉತ್ಪಾದನೆ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ 15 ವರ್ಷಗಳಲ್ಲಿ ನೀರಾವರೀ ಯೋಜನೆಯಲ್ಲಿ ನಮ್ಮ ರಾಜ್ಯ ಬಹಳವಾಗಿ ಹಿಂದುಳಿದಿದೆ ಎಂಬುದಾಗಿ ಎಷ್ಟು ಹೇಳಿದರೂ ಕಡಿಮೆ. ಮಾನ್ಯ ಮುಖ್ಯಮಂತ್ರಿಗಳು ಕನಸಿನಲ್ಲಿಯೂ ಕೃಷ್ಣಾಯೋಜನೆಯ ಮೇಲ್ದಂಡೆಯನ್ನು ಕೇಂದ್ರ ಸರ್ಕಾರದವರೇ ತೆಗೆದುಕೊಳ್ಳಲಿ ಎಂಬುದಾಗಿ ಹೇಳುತ್ತಲೇ ಇದ್ದಾರೆ. ಅವರು ಏಕೆ ಅದನ್ನು ತೆಗೆದುಕೊಳ್ಳುತ್ತಾರೆಂದರೆ, ಕೃಷ್ಣಾ ಯೋಜನೆಯ ಮೇಲ್ದಂಡೆ ಕಟ್ಟಿದರೆ ನಾಗಾರ್ಜುನ ಸಾಗರದ ಯೋಜನೆಗೆ ಅನುಕೂಲವೆ? ಅಲ್ಲಿ ರಾಯರು ಇದ್ದಾರೆ. ಅವರು ಚೆನ್ನಾಗಿ ದುಡ್ಡು ಮಾಡುತ್ತಾರೆ. ನಾನು ಹೇಳುವುದಿಷ್ಟೆ ನೂರಾರು ಕೋಟಿ ರೂಪಾಯಿಗಳ ಯೋಜನೆ ಈಗ ಏಕೆ? ಸಣ್ಣ ನೀರಾವರಿ ಯೋಜನೆಗಳನ್ನು ಮಾಡುತ್ತೇವೆಂದು ಹೇಳಿ ಇವರು ಅದರಲ್ಲಿ ಮಾಡಿರುವ ಪ್ರಗತಿಯಾದರೂ ಏನು? ಈ ವಿಷಯ ನೀರಾವರಿಯಲ್ಲಿ ತೊಡಗಿರುವವರಿಗೆ ಗೊತ್ತಿದೆ. ನಾವು ಇಲ್ಲಿ ಏನು ಹೇಳಿದರೂ ಪ್ರಯೋಜನವಿಲ್ಲ. ಸರ್ಕಾರದವರು ತಮ್ಮ ನೀತಿಯನ್ನು ಇತ್ತೀಚೆಗೆ ಬದಲಾಯಿಸಿದ್ದಾರೆ. ಕೋ-ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರರುಗಳನ್ನೆಲ್ಲಾ ದೆಹಲಿಯಲ್ಲಿ ಕರೆಸಿ ಬಹಳ ದೊಡ್ಡ ಪ್ರಾಮುಖ್ಯವಾದ ಸಭೆ ಸೇರಿಸಿ ಅಲ್ಲಿ ಗಂಭೀರವಾಗಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಅಲ್ಲಿ ಸಮಾಜೀಕರಣ ಮಾಡುತ್ತೇವೆಂದು ಹೇಳಿದರು. ಇವರ ಮೊದಲ ಗುರಿಯಿದ್ದುದು ಎರಡು ಸಾವಿರ ಪ್ರಾಥಮಿಕ ಸೊಸೈಟಿಗಳನ್ನು ತೆರೆಯುತ್ತೇವೆ ಮತ್ತು 100 ಸ್ಥಳಗಳಲ್ಲಿ ಹೋಲ್‌ಸೇಲ್ ಸ್ಟೋರುಗಳನ್ನು ತೆಗೆಯುತ್ತೇವೆ ಎಂಬುದಾಗಿತ್ತು. ಅದರಲ್ಲಿ ಈಗ ಸ್ವಲ್ಪ ತಿದ್ದುಪಡಿಮಾಡಿ 87 ಸ್ಥಳಗಳಲ್ಲಿ 1,378 ಪ್ರೈಮರಿ ಸ್ಟೋರ್ಸುಗಳನ್ನೂ 43 ಡಿಪಾರ್ಟ್‌ಮೆಂಟ್ ಸ್ಟೋರುಗಳನ್ನು ತೆರೆಯುತ್ತಿದ್ದಾರೆ. 1967 ನೇ ಮಾರ್ಚ್ ತಿಂಗಳೊಳಗೆ ಇದೇ ರೀತಿಯಲ್ಲಿ ಇನ್ನೊಂದು ಕಂತಿನಲ್ಲಿ ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಡಿ ಅಷ್ಟು ಹೊತ್ತಿಗೆ ಮುಗಿಸುತ್ತೇವೆ ಎಂಬುದಾಗಿ ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿಯೂ ಈ ಕಾರ್ಯಕ್ರಮ ಆರಂಭವಾಗಿದೆಯೆಂದು ನಾನು ಕೇಳಿದ್ದೇನೆ. The commodities that will be sold through these Stores are baby food, vanaspathi, edible oils, tea, coffee, kerosene oil, diesel oil, matches, taxtiles and wollens, Cycle tyres and tubes, soap, razor-blades, electric bulbs and drugs and medicines.

ಈಚೆಗೆ ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆಂಬುದನ್ನು ನೋಡಿ. ಎಸೆನ್ಸಿಯಲ್ ಕಮಾಡಿಟೀಸ್ ಆಕ್ಟನ್ನು ಉಪಯೋಗಿಸಬೇಕಾಗುತ್ತದೆ ಎಂದು ಹೇಳಿದ್ದಾರೆ. ಎಸೆನ್ಷಿಯಲ್ ಕಮಾಡಿಟೀಸ್‌ಗೆ ಸಂಬಂಧಪಟ್ಟಹಾಗೆ ಹೊಸ ಕಾನೂನು ಇಲ್ಲ. ವನಸ್ಪತಿ, ಡಾಲ್ಡ ಮತ್ತು ಮೈದಾಹಿಟ್ಟು ಇವುಗಳನ್ನು ಬೆರೆಸಿ ಚೆನ್ನಾಗಿ ಕುಟ್ಟಿ ಬೆಣ್ಣೆಯನ್ನು ತಯಾರು ಮಾಡಿ ಅದಕ್ಕೆ ಮಂಡ್ಯ ಬೆಣ್ಣೆ ಎಂದು ಬೋರ್ಡ್ ಹಾಕಿಕೊಂಡು ಮಾರಾಟ ಮಾಡುತ್ತಾರೆ. ಈಗ ಕೆಲವರು ಕೆಲವು ಔಷಧಿಗಳನ್ನು ತಯಾರು ಮಾಡಿ ಅವುಗಳಿಗೆ ಯಾವುದಾದರೂ ಲೇಬಲ್ ಹಾಕಿಕೊಂಡು ಅದನ್ನು ಸಂಜೀವಿನಿ ಎಂದು ಮಾರುವವರು ಇದ್ದಾರೆ. ಕಾನೂನು ಪ್ರಕಾರ ಅವರು ಜೈಲಿಗೆ ಹೋಗಬೇಕು. ಆದರೆ ಅವರನ್ನು ಕೇಳುವವರು ಯಾರಿದ್ದಾರೆ? ಪೆರಿಯಾರ್ ಹೇಳಿದಹಾಗೆ ಇಂಗ್ಲೆಂಡಿನಿಂದ ಜಡ್ಜಿಗಳನ್ನು ಕರೆಸಬೇಕು ಎನ್ನುವ ಸ್ಥಿತಿಗೆ ಬಂದಿದೆ. ಈಚೆಗೆ ಚಿಂತಾಮಣಿಯಲ್ಲೇನೋ ಯಾರೋ Spurious Drug ಮಾರುತ್ತಿದ್ದವರನ್ನು ಹಿಡಿದಿದ್ದಾರೆಂದು ಗೊತ್ತಾಯಿತು.

ಒಬ್ಬರು ಮಾನ್ಯ ಸದಸ್ಯರು.—ಅವರನ್ನು ಆಗಲೇ ಬಿಟ್ಟು ಬಿಟ್ಟರು.

ಶ್ರೀ ಎಸ್. ಗೋಪಾಲಗೌಡ.—ಬಿಡದೇ ಇನ್ನೇನು ಮಾಡಿಯಾರು? ಅವರಿಗೆ ಆ ವಿಷಯ ಒಂದು ಸಾರಿ ಪತ್ರಿಕೆಯಲ್ಲಿ ಬಂದರೆ ಸರಿ. ಈ ವಿಷಯದಲ್ಲಿ ಸರ್ಕಾರದವರನ್ನು ನಾವು ಎಷ್ಟು ಕಟುವಾಗಿ ಟೀಕಿಸಿದರೂ ಬಹಳ ಕಡಿಮೆ. ವಸ್ತು ಸ್ಥಿತಿಯನ್ನು ಪೂರ್ಣವಾಗಿ ಗ್ರಹಿಸತಕ್ಕ ಶಕ್ತಿ

ಸರ್ಕಾರಕ್ಕೆ ಇಲ್ಲ. ಸ್ವಲ್ಪಮಟ್ಟಿಗೆ ಗ್ರಹಿಕೆ ಇದ್ದರೂ ಕೂಡ ನಿಷ್ಠುರವಾಗಿ ಕಾನೂನು ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆಯನ್ನು ವಿಧಿಸಿ ಜನತೆಯನ್ನು ರಕ್ಷಿಸಿಕೊಳ್ಳುವುದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಳ್ಳತಕ್ಕ ಸಾಮರ್ಥ್ಯವಾಗಲೀ ಮನಸ್ಸಾಗಲೀ ಸರ್ಕಾರಕ್ಕೆ ಇಲ್ಲ.

ಇನ್ನು ಸರ್ಕಾರದವರು ರಿಲೀಫ್ ಕಾಮಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಕೋಲಾರ ಜಿಲ್ಲೆಯಲ್ಲಿ ಒಬ್ಬರು ಎಂ.ಪಿ.ಗಳು ಪ್ರವಾಸ ಮಾಡಿ ಅಲ್ಲಿ ಬಹಳ ಕಠಿಣ ಪರಿಸ್ಥಿತಿ ಇದೆ ಎಂದು ಹೇಳಿದ್ದಾರೆ. ಮತ್ತು ಅಲ್ಲಿಯ ಜಿಲ್ಲಾಧಿಕಾರಿಗಳೂ ಆ ವಿಷಯವನ್ನು ಹೇಳಿದ್ದಾರೆ. ಪರಿಹಾರ ಕಾಮಗಾರಿಗಾಗಿ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಕೊಟ್ಟಿದ್ದಂತಹ ಹಣವನ್ನು ವಾಪಸ್ಸು ಮಾಡಿದ್ದಾರೆ. ಮಳೆ ಬಂದಕೂಡಲೇ ಬೆಳೆ ಬೆಳೆಯುತ್ತದೆಯೇ? ಗೋಡೌನ್ ನಲ್ಲಿ, ಅಂಗಡಿಗಳಲ್ಲಿ ಧಾನ್ಯ ದಾಸ್ತಾನು ಇರಬಹುದು. 90 ನಯಾಪೈಸಾ ಕೊಟ್ಟರೆ ಅಂಗಡಿಯವನು ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತಾನೆ. ಆದರೆ ಜನಗಳಿಗೆ 90 ಪೈಸಾ ಬೇಕು. ಮೊನ್ನೆ ಶ್ರೀಮಾನ್ ದೇವರಾಜ್ ಅರಸ್ ಅವರು ಹೇಳಿದರು ನಾವು ಎಲ್ಲರಿಗೂ ಕೆಲಸವನ್ನು ಕೊಡುತ್ತೇವೆಂದು ಹೇಳಿದ್ದೇವೆಯೇ, ಈಗ ಮುಚ್ಚಿರುವ ಮಿಲ್ಲುಗಳ ವಿಷಯದಲ್ಲಿ ನಾವೇನು ಮಾಡುವುದಕ್ಕಾಗುತ್ತದೆ ಎಂದು ಹೇಳಿದರು. ಮರ್ಯಾದೆ ಇರತಕ್ಕಂಥ ದೇಶಗಳನ್ನೆಲ್ಲಾ ಶ್ರೀಮಾನ್ ಕಾಮರಾಜರು ನೋಡಿಕೊಂಡು ಬರುತ್ತಾರೆ. ಮರ್ಯಾದೆಯ ಸರ್ಕಾರ ಎಂದರೆ ಜನಗಳಿಗೆ ಉದ್ಯೋಗವನ್ನು ಕೊಡಬೇಕು. ಇಲ್ಲದೇ ಇದ್ದರೆ ಅವರಿಗೆ ನಿರುದ್ಯೋಗ ಭತ್ಯವನ್ನು ಕೊಡಬೇಕು. ಅದನ್ನು ಮರ್ಯಾದೆಯ ಸರ್ಕಾರ ಎಂದು ಹೇಳಬಹುದು. ಈಗ ಸರ್ಕಾರಿ ನೌಕರರನ್ನು ಸಸ್‌ಪೆನ್‌ಷನ್ ನಲ್ಲಿಟ್ಟರೆ ಅವರಿಗೆ ಸಂಬಳವನ್ನು ಕೊಡುತ್ತಾರೆ. ಅದೇ ರೀತಿ ಬೇರೆಯವರಿಗೂ ಏತಕ್ಕೆ ಕೊಡಬಾರದು? 100ಕ್ಕೆ 100 ಅಗತ್ಯವಾದ ಎಲ್ಲಾ ವಸ್ತುಗಳನ್ನೂ ಗೊತ್ತಾದ ಬೆಲೆಯಲ್ಲಿ ಕೊಡುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೂ ಸಹ ಜನಗಳು ಬಹಳ ಕಷ್ಟ ಸ್ಥಿತಿಯಲ್ಲಿರುವುದರಿಂದ ಅವುಗಳನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲ. ಮತ್ತು ಅವರಲ್ಲಿ ದುಡ್ಡು ಇಲ್ಲ. ಅವರು ಜೀವನವನ್ನು ನಡೆಸುವುದು ಬಹಳ ಕಠಿಣವಾಗಿದೆ. ಹೀಗಿರುವಾಗ ಈ ವರ್ಷ ಕೂಡ ಮಳೆ ತಡವಾಗಿ ಬಂದಿದೆ. ನಮ್ಮಲ್ಲಿ ಸಾಮಾನ್ಯವಾಗಿ ಹೋದವರ್ಷ ಈ ವೇಳೆಗೆ 100 ಅಂಗುಲ ಮಳೆಯಾಗಿತ್ತು. ಈ ವರ್ಷ 50 ಅಂಗುಲ ಮಳೆಯಾಗಿದೆ. ಮುಖ್ಯವಾದ ಮಳೆಗಳೇ ಬಂದಿಲ್ಲ.

ಈಗ ನಮ್ಮಲ್ಲಿ ಮಳೆ ತಡವಾಗಿ ಬಂದದ್ದರಿಂದ ಬತ್ತದ ಪೈರು ನಾಟಿಹಾಕುವುದು ಒಂದು ತಿಂಗಳು ಮುಂದೆ ಹೋಗಿದೆ. ಮಲೆನಾಡು ಪ್ರದೇಶದಲ್ಲಿ ಈಗ ಭದ್ರ ಮತ್ತು ತುಂಗಾ ನಾಲೆಗಳಲ್ಲಿ ಸ್ವಲ್ಪ ನೀರು ಬರುತ್ತಿದೆ. ಹಾಗೆಯೇ ಕೃಷ್ಣರಾಜಸಾಗರದಲ್ಲಿಯೂ ಸ್ವಲ್ಪಮಟ್ಟಿಗೆ ನೀರು ಬರುತ್ತಿದೆ. ಮಾನ್ಯ ಆಹಾರ ಮಂತ್ರಿಗಳು ನಮಗೆ ಅಮೇರಿಕಾದಿಂದ ಗೋಧಿ ಬರುತ್ತದೆ ಅದನ್ನು ಜನಗಳಿಗೆ ಕೊಟ್ಟು ಅಭಾವ ಪರಿಸ್ಥಿತಿಯನ್ನು ಹೋಗಲಾಡಿಸುತ್ತೇವೆಂದು ಹೇಳಿದ್ದಾರೆ. ಅವರು ಈಗ ಮಳೆ ಬಂದಿದೆ, ಮತ್ತೊಂದು ಬೆಳೆ ಆಗುತ್ತದೆ ಎಂದು ಅದರ ಲೆಕ್ಕದಲ್ಲಿ ಮಗ್ನರಾಗಿದ್ದಾರೆ. ಈಗ ನಮಗೆ ಎಷ್ಟು ಬೆಳೆ ಬರುತ್ತದೆ ಕೊರತೆ ಎಷ್ಟು ಬರುತ್ತದೆ ಎಂಬುದನ್ನು ವಿಚಾರ ಮಾಡಿದರೆ ಅದು ಬರೀ ಊಹಾಪೋಹವಾಗುತ್ತದೆ. ವಸ್ತುಸ್ಥಿತಿಯನ್ನು ನೋಡುವುದಾದರೆ ಬಹುತೇಕ ಹಳ್ಳಿಗಳಲ್ಲಿ ಜನರಿಗೆ ಉದ್ಯೋಗ ಇಲ್ಲದೆ, ತಿನ್ನುವುದಕ್ಕೆ ಅನ್ನವಿಲ್ಲದೆ ಊರೂರುಗಳನ್ನು ತಿರುಗುವ ಪರಿಸ್ಥಿತಿ ಬಂದಿದೆ. ಕೋಲಾರ ಜಿಲ್ಲೆಯಲ್ಲಿ ಅನೇಕ ಜನಗಳು ಊರನ್ನು ಬಿಟ್ಟು ಗುಳೇ ಕಟ್ಟಿಕೊಂಡು ಹೋಗುತ್ತಿದ್ದಾರೆ. ಜನಗಳು ಊರು ಮತ್ತು ಮನೆಗಳನ್ನು ಬಿಟ್ಟು ಹೋಗತಕ್ಕ ಪರಿಸ್ಥಿತಿ ಅನೇಕ ಹಳ್ಳಿಗಳಲ್ಲಿ ಇದೆ, ಯಾರ್ಡಿಯವರು ಕೊಟ್ಟಂತಹ ವರದಿಯ ಪ್ರಕಾರ ಪರಿಹಾರ ಕಾಮಗಾರಿಗಳನ್ನು ಮಾಡುವುದಕ್ಕಾಗಿ ಕೇಂದ್ರ ಸರ್ಕಾರದವರನ್ನು ನಮ್ಮ ರಾಜ್ಯ ಸರ್ಕಾರದವರು 4 ಕೋಟಿ ರೂಪಾಯಿಗಳನ್ನು ಕೇಳಿದ್ದರು. ಈಗ ಒಂದು ಕೋಟಿ ರೂಪಾಯಿಗಳನ್ನು ಅವರು ಕೊಟ್ಟಿದ್ದಾರೆ. ಈಗ ಸರ್ಕಾರದವರು ಒಂದು ಬಾಬಿನಲ್ಲಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈಗ ಮತ್ತೆ 2 ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಆದರೆ ಈ ಹಣವನ್ನು ವಿತರಣೆ ಮಾಡುವುದರಲ್ಲಿ ಒಂದು ನಿಯೋಜಿತವಾದ ಕ್ರಮ ಬೇಕು. ಹಳೆಯ ರೀತಿಯಲ್ಲಿ ಸರ್ಕಾರದವರು ಪರಿಹಾರ ಕಾಮಗಾರಿಗಳನ್ನು ಮಾಡಿಸತಕ್ಕ ಕ್ರಮ ಏನಿದೆ ಅದರಿಂದ ಜನಗಳು ಬರುವುದಿಲ್ಲ. ಆದ್ದರಿಂದ ಪರಿಹಾರ ಕಾಮಗಾರಿಗಳನ್ನು ಶುರು ಮಾಡಿದರೂ ಕೂಡ ಜನಗಳು ಕೆಲಸಕ್ಕೆ ಬರಲಿಲ್ಲ ಎಂದು ಹೇಳುವ ಪರಿಸ್ಥಿತಿ ಉಂಟಾಗುತ್ತಿದೆ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಪರಿಶೀಲನೆ ಮಾಡಿ ವಾಸ್ತವವಾಗಿ ಜನಗಳಿಗೆ ಉದ್ಯೋಗವನ್ನು ಕೊಡುವ ದೃಷ್ಟಿಯಿಂದ ಸಣ್ಣ ಕಾಮಗಾರಿಗಳನ್ನು ಆರಂಭಿಸಿ ಅವರಿಗೆ ಕೂಲಿ ಸಿಕ್ಕುವ ಹಾಗೆ ಮಾಡಬೇಕು. ಮತ್ತು ಈಗ ಸರ್ಕಾರದವರು ಹಳ್ಳಿಗಳಿಗೆ ಎಷ್ಟೆಷ್ಟು ಆಹಾರ

(ಶ್ರೀ ಎಸ್. ಗೋಪಾಲಗೌಡ)

ಧಾನ್ಯವನ್ನು ಕೊಡುತ್ತೇವೆಂದು ಹೇಳಿದ್ದಾರೆಯೋ ಅದನ್ನು ಅವರಿಗೆ ಕೊಡಲು ಹಳ್ಳಿಗಳಲ್ಲಿರುವ ಸಹಕಾರ ಸಂಘಗಳಿಗೆ ಆಹಾರ ಧಾನ್ಯವನ್ನು ಒದಗಿಸಬೇಕು. ಹಳ್ಳಿಗಾಡಿನ ಜನರಿಗೆ ಇನ್ನು 3 ತಿಂಗಳು ಕಾಲ ಮಾತ್ರ ಸ್ವಲ್ಪ ಕಷ್ಟ ಇದೆ. ಆದ್ದರಿಂದ ಆಗಸ್ಟ್, ಸೆಪ್ಟೆಂಬರ್ ತಿಂಗಳಿನಿಂದ ನವಂಬರ್ ತಿಂಗಳವರೆಗೆ ಇನ್ನೊಂದು ಬೆಳೆ ಬರುವವರೆಗೂ ಹಳ್ಳಿಗಾಡಿನ ಜನರಿಗೆ ಸರ್ಕಾರದವರು ಆಹಾರಧಾನ್ಯವನ್ನು ಒದಗಿಸಬೇಕಾಗುತ್ತದೆ. ಆ ರೀತಿ ಸರ್ಕಾರದವರು ಜನಗಳಿಗೆ ಆಹಾರವನ್ನು ಒದಗಿಸುವಾಗ ಬೆಲೆಗಳನ್ನು ಸಬ್‌ಸಿಡೈಜ್ ಮಾಡಿ ಅಂಗಡಿಗಳ ಮುಖಾಂತರ ಒದಗಿಸಬೇಕು. ಸರ್ಕಾರದವರು ಒಂದೆರಡು ಕಡೆ ನ್ಯಾಯ ಬೆಲೆಯ ಅಂಗಡಿಗಳನ್ನು ತೆರೆದರೆ ಅವು ಎಲ್ಲಿ ಹೋದುವೋ ಗೊತ್ತಿಲ್ಲ. ಈಗ ಇರತಕ್ಕ ಅಂಗಡಿಗಳನ್ನು ಮುಂದುವರಿಸುವುದರ ಜೊತೆಗೆ ಅವಶ್ಯಕ ಬಿದ್ದರೆ ಗ್ರಾಮ ಪಂಚಾಯಿತಿಗಳ ಮುಖಾಂತರ ಅಂಗಡಿಗಳನ್ನು ತೆರೆಯಬೇಕು, ಮತ್ತು ಖಾಸಗೀಯವರ ಸಹಾಯದಿಂದ ನಡೆಸತಕ್ಕ ಅಂಗಡಿಗಳನ್ನು ಮುಂದುವರಿಸಬೇಕು. ಪರಿಹಾರ ಕಾಮಗಾರಿಗಳನ್ನು ರಾಜ್ಯದ ಎಲ್ಲಾ ಕಡೆಗಳಲ್ಲೂ ಮಾಡುವಂತೆ ವ್ಯವಸ್ಥೆ ಮಾಡಬೇಕು. ಅವುಗಳಿಗೆ ಸರ್ಕಾರದವರು ಹೆಚ್ಚು ಗಮನ ಕೊಟ್ಟು ಅವುಗಳನ್ನು ತೀವ್ರಗತಿಯಿಂದ ಆರಂಭಮಾಡಬೇಕು. ಈಗ ಹಳ್ಳಿಗಾಡುಗಳಲ್ಲಿ ಜನರಿಗೆ ತೀರ ಕಳವಳ ಪರಿಸ್ಥಿತಿ ಉಂಟಾಗಿದೆ. ಈಗ ಸ್ವಲ್ಪ ಮಳೆ ಬರುತ್ತಿದೆ, ಈ ದಿವಸ ಒಳ್ಳೆಯ ಪರಿಸ್ಥಿತಿ ಇದೆಯೆಂದು ಹೇಳಿದರೂ ಕೂಡ ಈಗ ಸಧ್ಯದಲ್ಲಿರತಕ್ಕ ಆಹಾರದ ಅಭಾವವನ್ನು ಎದುರಿಸುವುದಕ್ಕೆ ಒಂದು ದಿಟ್ಟತನದ ಹೆಜ್ಜೆಯನ್ನು ಇಡಬೇಕು. ಈ ಅಭಾವ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಎಲ್ಲಾ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳುವುದಕ್ಕೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದವರ ಸಹಾಯವನ್ನು ಪಡೆದು ಅದನ್ನು ಮಾಡುತ್ತಾರೆಂದು ಆಶಿಸಿ ನಾನು ನನ್ನ ಮಾತನು ಮುಗಿಸುತ್ತೇನೆ.

Mr. SPEAKER.—I understand very well the expressions of the members. But the members must realise what exactly is the nature of the business transacted in this House. In fact one of the members suggested that I might suspend the rules. I just would like members to know something which governs us beyond any dispute. Rule 59 deals with discussion on matters of urgent public importance for short duration ;

"Any member desirous of raising discussion on a matter of urgent public importance may give notice in writing to the Secretary specifying clearly and precisely the matter to be raised :

Provided that the notice shall be accompanied by an explanatory note stating reasons for raising a discussion on the matter in question :

Provided further that the notice shall be supported by the signatures of at least two other members.

(60) If the the Speaker is satisfied, after calling for such information from the member who has given notice and from the Minister as he may consider necessary, that the matter is urgent and is of sufficient importance to be raised in the Assembly at an early date, he may admit the notice and in consultation with the Leader of the House fix the date on which such matter may be taken up for discussion and allow such time for discussion not exceeding two and a half hours, as he may consider appropriate in the circumstances ;

Provided that if an early opportunity is otherwise available for the discussion of the matter the Speaker may refuse to admit the notice.

(61) There shall be no formal motion before the Assembly nor voting. The member who has given notice may make a short statement and the Minister shall reply shortly. Any member who has previously intimated to the Speaker may be permitted to take part in the discussion.

(62) The Speaker may, if he thinks fit, presccibe a time-limit for the speeches ''

This is the position. I have to call upon the Minister for Food to reply. He has to give a very short reply.

ಶ್ರೀ ಬಿ. ಡಿ. ಜತ್ತಿ (ಆಹಾರಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದಂಥ ಶ್ರೀಮಾನ್ ಗೋಪಾಲಗೌಡರು ಅನೇಕ ಮಾತುಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಅವರು ಅನೇಕ ಮಾತು ಇಡುವ ಕಾಲಕ್ಕೆ ಕೆಲವು ಉದಾಹರಣೆಗಳನ್ನು ಮಾತ್ರ ಹೇಳಿದ್ದಾರೆ. ಅದರೊಳಗೆ ಒಂದೆರಡು ಉದಾಹರಣೆ ಹೇಳುತ್ತಾ ಆಹಾರ ಇಲ್ಲದೆ ಸತ್ತರು ಎಂದು ಆಪಾದನೆ ಮಾಡಿದರು. ಆದರೆ ಸರ್ಕಾರದವರು ಇದುವರೆಗೆ ಪೋಲೀಸ್ ಡಿಪಾರ್ಟ್‌ಮೆಂಟಿನಿಂದ ತರಿಸಿಕೊಂಡಂಥ ವರದಿ ಪ್ರಕಾರ ಅವರು ಹೇಳಿದಂಥ ಎರಡು ಉದಾಹರಣೆ ಬಗ್ಗೆ ನನಗೆ ಸಿಕ್ಕಿದವರದಿ ಪ್ರಕಾರ, ಹೊಟ್ಟೆಗಿಲ್ಲದೆ ಸತ್ತಿಲ್ಲ, ವಯಸ್ಸು ಬಹಳ ಆಗಿದೆ, ಖಾಯಿಲೆ ಆಗಿದೆ ಅದರಿಂದ ಸತ್ತರು, ಇದಕ್ಕಿಂತ ಹೆಚ್ಚಿಗೆ ಪರಿಶೀಲನೆ ಬೇಕಾದರೆ ಮಾಡ ಬೇಕಾಗುತ್ತದೆ. ಈಗ ಹೇಳಬೇಕಾದರೆ ಇಷ್ಟು ವರದಿ ಸರ್ಕಾರದ ಕಡೆಗೆ ಇದೆ.

ಆಹಾರಧಾನ್ಯದ ವಿತರಣೆ ಬಗ್ಗೆ ಕೆಲವು ಸಂಗತಿಗಳನ್ನು ಹೇಳಿದರು. ವಿತರಣೆ ಮಾಡುವ ಕಾಲಕ್ಕೆ ದೇಶದಲ್ಲಿ ಎಲ್ಲಾ ಸರಿಯಾಗಿದೆ ಎಂದು ನಾನು ಹೇಳಲಿಕ್ಕೆ ಪ್ರಯತ್ನ ಮಾಡುವುದಿಲ್ಲ. ವಿತರಣೆ ಮಾಡುವ ಕಾಲಕ್ಕೆ, ಯಾರಿಗೆ ಆಹಾರ ಬೇಕು ಎಂದು ತೆಗೆದುಕೊಂಡು ಹೋಗುತ್ತಾರೋ, ಆ ಆಹಾರ ಅವರಿಗೆ ಮುಟ್ಟದೇ ಕೆಲವು ಕಡೆ ಮಾರಾಟ ಮಾಡಿದ್ದು ಇದೆ, ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ತಕ್ಷಣ ಕ್ರಮ ತೆಗೆದುಕೊಳ್ಳದೇ ಇದ್ದರೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ, ಎನ್ನುತ್ತಾರೆ, ಕ್ರಮ ತೆಗೆದುಕೊಳ್ಳೋಣವೆಂದರೆ, ಏತಕ್ಕೆ ಕ್ರಮ ತೆಗೆದುಕೊಂಡಿರಿ, ಹೇಗಾದರೂ ಆಹಾರಧಾನ್ಯ ಬರುತ್ತಾ ಇದೆ ಎಂದು ಹೇಳುತ್ತಾರೆ. ಕಟ್ಟುನಿಟ್ಟಾಗಿ ಕ್ರಮ ತೆಗೆದುಕೊಂಡು, ಕೋರ್ಟಿಗೆ ಕೇಸು ಕಳಿಸಿದ ನಂತರ ಆಕ್ಷೇಪಣೆ ಮಾಡಲಿಕ್ಕೆ ಇದ್ದಾರೆ. ಪ್ರಜಾರಾಜ್ಯದಲ್ಲಿ ಎರಡು ರೀತಿಯಲ್ಲಿ ಹೇಳಲಿಕ್ಕೂ ಅವಕಾಶ ಇದೆ. ಹೋದವರ್ಷದ ಪರಿಸ್ಥಿತಿ ನೋಡಿದಾಗ ನಮ್ಮೆಲ್ಲ ಆಹಾರ ಪರಿಸ್ಥಿತಿ ಕೆಡಬಹುದು ಎಂದು ಕಲ್ಪನೆ ಮಾಡಿದ್ದೆವು. ಕೆಲವರು ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್‌ನಲ್ಲಿ ತೊಂದರೆ ಆಗಬಹುದು ಎಂದು ಹೇಳಿದರು. ಈಗ ಜುಲೈ ತಿಂಗಳು ಆಯಿತು. ಈಗ ನಾನು ಹೇಳುತ್ತೇನೆ, ಇದುವರೆಗೆ ಅಂತಹ ಕಷ್ಟ ಪರಿಸ್ಥಿತಿ ಒದಗಿಲ್ಲ, ಹೇಗಾದರೂ ಮಾಡಿ ಜನಗಳಿಗೆ ಆಹಾರಧಾನ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇನ್ನು ಒಂದೆರಡು ತಿಂಗಳು ಕಷ್ಟ ಇದೆ ಎಂದು ಹೇಳುತ್ತಾರೆ. ಈ ಒಂದೆರಡು ತಿಂಗಳೂ ಕೂಡ ಇದುವರೆಗೆ ಯಾವರೀತಿ ಕಷ್ಟದಿಂದ ಪಾರಾಗಿದ್ದೇವೋ ಅದೇರೀತಿ ಮುಂದೆಯೂ ಪಾರಾಗಬಹುದು ಎನ್ನುವ ನಂಬಿಕೆ ಇದೆ. ಬಹಳ ಸದಸ್ಯರಿಗೂ ಕೂಡ ಅದೇರೀತಿ ನಂಬಿಕೆ ಇದೆ. ಇವೊತ್ತಿನ ದಿವಸ ಎಲ್ಲೆಲ್ಲಿ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಬೇಕು ಎಂಬುದನ್ನು ಸರ್ಕಾರ ಒಪ್ಪಿದೆಯೋ ಎಲ್ಲೆಲ್ಲಿ ಕ್ಷಾಮ ಪರಿಸ್ಥಿತಿ ಇದೆಯೋ ಅಲ್ಲೆಲ್ಲ ನಾನಾ ತರಹ ಕೆಲಸಗಳನ್ನು ಪ್ರಾರಂಭ ಮಾಡಿದ್ದೇವೆ. ತಮ್ಮ ತಮ್ಮ ತಾಲ್ಲೂಕಿನಲ್ಲಿ ಏನೇನು ಕೆಲಸಕಾರ್ಯಗಳು ಆಗಿವೆ ಎಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಅದರಲ್ಲಿ ವಿಶೇಷವಾಗಿ ಸರ್ಕಾರದವರು ಹೆಚ್ಚಿಗೆ ಗಮನಕೊಟ್ಟದ್ದು Soil conservation works, desilting of tanks, repairing of bridges, and tanks, repairing shinees and bunds, construction of feeder channels from tanks to their atchkats, deepening of irrigation wells, deepening of drinking water wells, excavation of earth works, road works, etc. ರಸ್ತೆ ಕೆಲಸವನ್ನು ಕೊನೆಯದಾಗಿ ಇಟ್ಟಿದ್ದೇವೆ. ಯಾವ ಕೆಲಸವೂ ಸಿಕ್ಕದೆ ಇದ್ದರೆ.

(ಶ್ರೀ ಬಿ. ಡಿ. ಜತ್ತಿ)

ಜನಗಳಿಗೆ ಕೆಲಸ ಇಲ್ಲದೇ ಕಷ್ಟ ಆಗಬಾರದು ಎಂದು. ಈ ತರಹ ಕೆಲಸ ಎಲ್ಲಾ ಕಡೆ ಮಾಡಿದ್ದೇವೆ. ನಮ್ಮ ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ಹೊಸದಾಗಿ ಪಾರ್ಲಿಮೆಂಟ್ ಸದಸ್ಯರಾದವರು ಪೇಪರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಎಂದು ಹೇಳಿದರು. ಆ ಹೇಳಿಕೆಯನ್ನು ನೋಡಿದೆ ಮತ್ತು ಇಲಾಖೆಯಿಂದ ಬೇಕಾದಂಥ ಮಾಹಿತಿಯನ್ನು ಕೂಡ ತರಿಸಿ ನೋಡಿದೆ. ಅವರು ಹೇಳಿದ ಸಂಗತಿ ಬಹಳ ಮಟ್ಟಿಗೆ ಸರಿ ಇಲ್ಲ. ಅಂಕಿ ಸಂಖ್ಯೆಗಳನ್ನು ಹೇಳಬೇಕಾಗುತ್ತದೆ, ಸ್ವಲ್ಪದರೊಳಗೆ ಹೇಳಬೇಕೆಂದು ಅಧ್ಯಕ್ಷರು ಹೇಳಿದ್ದಾರೆ.

ಅಧ್ಯಕ್ಷರು.—ಅಗತ್ಯವಾಗಿ ಇದ್ದುದನ್ನು ಪೂರ್ಣವಾಗಿ ಹೇಳಬೇಕು.

ಶ್ರೀ ಬಿ. ಡಿ. ಜತ್ತಿ.—ಶ್ರೀಮಾನ್ ಲಂಗಾರೆಡ್ಡಿಯವರು ತಮ್ಮ ಜಿಲ್ಲೆಯೊಳಗೆ ಒಂದೆರಡು ತಾಲ್ಲೂಕಿಗೆ ಹೋಗಿ ಕೆಲವು ವರದಿ ಕೊಟ್ಟಿದ್ದಾರೆ. ವಿಶೇಷವಾಗಿ ಹೇಳಿದಂಥ ಸಂಗತಿಯನ್ನು ಹೇಳುತ್ತೇನೆ. ಹುದುಗೂರು ಗ್ರಾಮದೊಳಗೆ ನರಸಪ್ಪ ಮತ್ತು ಗಂಗಪ್ಪ ಎನ್ನುವವರು ಆಹಾರ ಇಲ್ಲದೆ ಸತ್ತರು ಎಂದು ಹೇಳಿದರು. ಈ ಸಂಗತಿ ಸರಿ ಇಲ್ಲ. ಇಬ್ಬರಿಗೂ 70 ವರ್ಷಕ್ಕಿಂತ ಹೆಚ್ಚಿಗೆ ಆಗಿದೆ. ಇಬ್ಬರಿಗೆ ಖಾಯಿಲೆ ಆಗಿತ್ತು. ಸಾಯುವ ಕಾಲಕ್ಕೆ ಸರಿಯಾದ ರೀತಿಯಿಂದ ಸತ್ತಿದ್ದಾರೆ, ಆಹಾರ ಇಲ್ಲದೇ ಸತ್ತಿಲ್ಲ. ಎರಡನೆಯದು ಅದೇ ಮಾನ್ಯ ಸದಸ್ಯರು ಕೆಲಸ ಆಗಲಲ್ಲ ಎಂದು ಹೇಳಿದ್ದಾರೆ. ಪಟ್ಟಿ ಹೇಳಬೇಕಾದರೆ ಬಹಳ ಆಗುತ್ತದೆ. ಅದರಲ್ಲಿ 5-6 ಮಾತ್ರ ಹೇಳುತ್ತೇನೆ.

ಹುದುಗೆರೆಯಲ್ಲಿ ಕೈಕೊಂಡ ಕಾರ್ಯಕ್ರಮಗಳು ಈ ಕೆಳಗಿನಂತಿವೆ. ಅದನ್ನು ಇಲ್ಲಿ ಓದುತ್ತೇನೆ.

(1) Desilting of Hudugur tank at an estimated cost of Rs. 4,650 undertaken from October 1965 to March 1966 providing labour to about 4800 man days of work.

5-30 P M.

(2) Three works at an estimated cost of Rs. 3,000 were taken up, providing labour to about 300 people between 17th June 1966 and 12th July 1966.

(3) Digging of a feeder channel to Hudugur tank during May and June and upto about 5th July 1966 providing work to about 200 labourers per day.

(4) Work of restoration of Lakkasandra tank at an estimated cost of Rs. 34,000 (one and a half miles from Hudugur) was commenced about 25 days ago providing employment to about 300 to 400 labourers per day.

(5) As regards distribution of foodgrains, which are alleged to be meagre, the Deputy Commissioner has stated that foodgrains are being issued to consumers Co-operative Society as under :—

Month	Wheat (in Quintals)	Rice	Milo	Ragi or Bajra	Jowar	Maize	Soji	Atta	Total
March 1966	49	—	—	23	—	45	1	4	122
April 1966	90	6	60	34	—	17	—	3	210
May 1966	79	—	39	10	—	—	1	2	131
June 1966	46	—	58	6	4	—	—	—	114
July 1966	55	9	30	—	—	—	—	—	94

ಈಗ ನಾನು ಹುದುಗೆರೆಯಲ್ಲಿ ಮಾರ್ಚಿ, ಏಪ್ರಿಲ್, ಮೇ, ಜೂನ್ ಜುಲೈಯೊಳಗೆ ಮಾಡಿದ್ದನ್ನ ಹೇಳಿದ್ದೇನೆ.

ಅದೇ ರೀತಿ ನಮಗೆ ಏನೊಂದು ವರದಿ ಬಂದಿದೆ, ಅದು ಕೂಡ ಇದೇ ರೀತಿ ಇದೆ. ಆಹಾರ ಧಾನ್ಯ ಸಿಕ್ಕಿಲ್ಲ ಎಂದು ಎನ್ನುವ ಮಾತು ಸರಿಯಲ್ಲ. ಮತ್ತು ಇವತ್ತಿನ ದಿವಸ ಮಾನ್ಯ ಸದಸ್ಯರು ಹೇಳುತ್ತಾರೆ, ಎಲ್ಲಾ ಬದಲಾವಣೆ ಮಾಡುವಾಗ 64ರ ಫ್ಯಾಮಿನ್ ಕೋಡನ್ನು ಯಾಕೆ ಬದಲಾವಣೆ ಮಾಡಬಾರದು ಎಂದು. ಎಲ್ಲಿ ಕ್ಷಾಮ ಇದೆ, ಅಲ್ಲಿ 64ನ್ನು ಉಪಯೋಗ ಮಾಡಿಲ್ಲ. ಅಲ್ಲಿ ಎಲ್ಲಾ ಕೆಲಸಗಳನ್ನು ಸರಿಯಾಗಿ ಪ್ರಾರಂಭ ಮಾಡಿದ್ದೇವೆ. ಮತ್ತು ಅಲ್ಲಿ ಕೆಲಸ ಮಾಡತಕ್ಕ ಕೆಲಸಗಾರ ರಿಗೆ ಸರ್ವಸಾಮಾನ್ಯವಾಗಿ ಆಹಾರವನ್ನು ಒದಗಿಸಿದ್ದೇವೆ. ಅದಕ್ಕಿಂತ ಹೆಚ್ಚು ಒದಗಿಸುವ ವಿಚಾರ ಈಗಾಗಲೇ ಸಭೆಯೊಳಗೆ ಹೇಳಿದ್ದೇನೆ. ಪ್ರತಿಯೊಬ್ಬ ಕೆಲಸಗಾರನಿಗೂ ಪ್ರತಿ ತಿಂಗಳು ತಲಾ 15 ಕೆ.ಜಿ. ಆಹಾರಧಾನ್ಯವನ್ನು ಕೊಡಬೇಕೆಂದು ಗೊತ್ತು ಮಾಡಿದ್ದೇವೆ.

ಇನ್ನೊಂದು ಮಾತನ್ನು ಮಾನ್ಯ ಸದಸ್ಯರೊಬ್ಬರು ಹೇಳಿದರು. ಒಂದು ಕಡೆ ಯಾರೋ ಸರ್ಕಾರದ ಪರವಾಗಿ ಆಹಾರಧಾನ್ಯದ ಗೋಡೌನ್ ಇಟ್ಟುಕೊಂಡು, ಅದು ಒಂದು ರಾತ್ರಿ ಕಳವಾ ಗಿದೆ ಎಂದು. ಈ ಮಾತು ಸರಿಯಿದೆ. ಇದರ ಮೇಲೆ ಸರ್ಕಾರದವರು ವಿಚಾರಣೆ ನಡೆಸಿದ್ದಾರೆ ಮತ್ತು ಕಾನೂನು ಪ್ರಕಾರ ಸಿವಿಲ್ ಕೋರ್ಟಿನಲ್ಲಿ ಸೂಟ್ ಫೈಲ್ ಮಾಡಿ ಹಣ ರಿಕವರ್ ಮಾಡಲು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಹಣ ವಸೂಲು ಮಾಡುವಾಗ ಲೆವಿ ರೇಟ್ ವಸೂಲು ಮಾಡುತ್ತೀರಾ? ಅಥವಾ ಲೋಕಲ್ ರೇಟ್ ವಸೂಲು ಮಾಡುತ್ತೀರಾ?

ಶ್ರೀ ಬಿ. ಡಿ. ಜತ್ತಿ.—ನಮಗೆ ಏನು ಕೊಡಬೇಕು, ಸರ್ಕಾರದ ರೇಟ್ ಏನಿದೆ ಅದಕ್ಕಿಂತ ಹೆಚ್ಚಿಗೆ ಕಾನೂನು ಪ್ರಕಾರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಈ ವ್ಯವಹಾರಗಳಿಗೆ ಯಾರು ಸಲಹೆ ಕೊಟ್ಟಿದ್ದು?

ಶ್ರೀ ಬಿ. ಡಿ. ಜತ್ತಿ.—ನಮ್ಮ ಸರ್ಕಾರದ ಲಾ ಡಿಪಾರ್ಟ್‌ಮೆಂಟ್ ಇದೆ. ಅವರ ಸಲಹೆಯ ಪ್ರಕಾರ ನಡೆಯಬೇಕಾಗುತ್ತದೆ. ನಮ್ಮ ಮನಸ್ಸಿಗೆ ಬಂದ ಹಾಗೆ ನಡೆಯುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಾದರೆ, ಯಾರು ಎಷ್ಟು ಬೇಕಾದರೂ ಮಾರಿ ದುಡ್ಡು ಕೊಡಬಹುದಲ್ಲವೇ?

ಶ್ರೀ ಬಿ. ಡಿ. ಜತ್ತಿ.—ಹಣವನ್ನು ಸರ್ಕಾರದವರು ಸಿವಿಲ್ ಸೂಟ್ ಹಾಕಿ ತೆಗೆದುಕೊಳ್ಳುತ್ತಾರೆ.

ಇನ್ನೊಂದು ವಿಚಾರ. ಫುಡ್ ಕಾರ್ಪೊರೇಶನ್ ವ್ಯವಹಾರ ಮಾಡುವ ಕಾಲಕ್ಕೆ ಅಕ್ಕಿ ಕೊಡ ತಕ್ಕಂತಹ ಏಜೆಂಟರು 19 ಲಾರಿ ಆಹಾರಧಾನ್ಯಗಳು ಇಲ್ಲ ಎಂದು ವರದಿ ಮಾಡಿದ್ದರು. ಆದರೆ, ಅದನ್ನು ಸರ್ಕಾರ ಇನ್‌ವೆಸ್ಟಿಗೇಶನ್ ಮಾಡಿ ವಾಪಸ್ಸು ಪಡೆದಿದೆ.

ಇನ್ನು ಶ್ರೀ ಗೋಪಾಲ ಗೌಡರು ಕೆಲವು ಸಂಗತಿಗಳನ್ನು ಹೇಳಿದ್ದಾರೆ. ಯಾವುದೇ ಒಂದು ವಿಷಯ ವಿಚಾರಣೆ ಮಾಡುವಾಗ ಅದರಲ್ಲಿ ಎರಡು ಮುಖಗಳು ಇರುತ್ತವೆ. ಒಂದು ಒಳ್ಳೆಯದು ಮತ್ತು ಇನ್ನೊಂದು ಕೆಟ್ಟದ್ದು. ಇವತ್ತಿನ ದಿವಸ ಮಳೆಇಲ್ಲದಿರುವ ಪ್ರದೇಶಗಳಲ್ಲಿ ಎಷ್ಟೊಂದು ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ ಎಂಬುದು ಅವರಿಗೆ ಗೊತ್ತಿದೆ. ಅವರು ಎಲ್ಲಾ ಕೆಟ್ಟದ್ದನ್ನೇ ಹೇಳಿದರೇ ಹೊರತು ಎಲ್ಲೆಲ್ಲಿ ಒಳ್ಳೆ ಕೆಲಸಗಳನ್ನು ಮಾಡಿದ್ದಾರೆ ಎಂದು ಹೇಳಿಲ್ಲ. ಇವತ್ತಿನ ದಿವಸ ನಮ್ಮ ದೇಶದಲ್ಲಿ ತೀವ್ರ ಪರಿಸ್ಥಿತಿ ಇರುವ ರಾಜ್ಯಗಳು ಇನ್ನೂ ಅನೇಕ ಇವೆ. ನನಗೆ ತಿಳಿದ ಹಾಗೆ ಇಲ್ಲಿಯ ಪರಿಸ್ಥಿತಿ ಅಷ್ಟೊಂದು ಕೆಟ್ಟಿಲ್ಲವೆಂದು ಹೇಳಬಹುದು. ಇರುವ ಪರಿಸ್ಥಿತಿ ಹದಗೆಡಬಹುದು ಎಂದು ಅದನ್ನು ತಡೆಯಲು ಎಷ್ಟು ಕಾರ್ಯಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕೋ ಅಷ್ಟು ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರ ಪ್ರಯತ್ನ ಮಾಡುತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರದವರನ್ನು ಪುನಃ ಪುನಃ ಒತ್ತಾಯ ಮಾಡಿ ಎರಡು ಕೋಟಿ ಹೆಚ್ಚಿಗೆ ಕೊಡಬೇಕೆಂದು ಕೇಳಿದ್ದಾರೆ. ಹೆಚ್ಚಿಗೆ ಬರುವ ನಿರೀಕ್ಷೆ ಇದೆ. ಬಂದರೆ ಎಲ್ಲೆಲ್ಲಿ ಜರೂರಾಗಿ ಕೆಲಸ ಮಾಡಬೇಕೋ ಅದನ್ನು ಮಾಡುತ್ತೇವೆ. ಆಹಾರಧಾನ್ಯವನ್ನು ವಿತರಣೆ ಕೊಡು ವಾಗ ಅಥವಾ ಕೋಟಾ ಕೊಡುವಾಗ ಆಗಲಿ ಯಾವ ರೀತಿಯ ತೊಂದರೆಯಾಗಿಲ್ಲ ಎಂದು ನಾನು ಹೇಳಬಲ್ಲೆ.

ಇನ್ನು ಮುಂದಿನ ಚುನಾವಣೆ ವಿಷಯ ಹೇಳಿದರು. ಅದರ ವಿಷಯ ನಾನು ಏನೂ ಹೇಳುವು ದಿಲ್ಲ. ಚುನಾವಣೆ ಅವರಿಗೂ ಬರುತ್ತದೆ, ಹಾಗೇ ನಮಗೂ ಬರುತ್ತದೆ. ಸಾಧ್ಯವಾದಷ್ಟು ಕೆಲಸಕಾರ್ಯಗಳನ್ನು ಮಾಡಿದ್ದೇವೆ, ಮತ್ತು ಏನಾದರೂ ದೋಷಗಳಿದ್ದರೆ ಅದನ್ನು ತಿದ್ದಲಿಕ್ಕೆ ಸರ್ಕಾರ ಯಾವಾಗಲೂ ಸಿದ್ಧವಿದೆ.

MR. SPEAKER.—After this is over, there is the half-an-hour discussion. If the hon. Member Sri Patil is agreeable, I will not have it today and try to give some time for this.

SRI C. J. MUCKANNAPPA.—Sri Patil is not here.

MR. SPEAKER.—Members may consult him in the lounge and let me know. I call upon Sri Muckannappa to speak.

(Sri P. Venkatagiriyappa rose)

MR. SPEAKER.—The Hon. Member must know that when a member has been called upon to speak, he has to wait till that member has finished.

ಶ್ರೀ ಪಿ. ವೆಂಕಟಗಿರಿಯಪ್ಪ.—ಸ್ವಾಮಿ ನಾನು ನೋಟೀಸ್‌ಗೆ ರುಜು ಹಾಕಿ ಕಳಿಸಿದ್ದೆ.

MR. SPEAKER.—I will give him no chance if the hon. Member insists. He is not entitled to a chance.

ಶ್ರೀ ಪಿ. ವೆಂಕಟಗಿರಿಯಪ್ಪ.—ರೂಲ್ ಏನು ಹೇಳುತ್ತದೆ ನನಗೆ ಕೊಡಬಾರದು ಎಂದು ಇದೆಯೇ?

ಅಧ್ಯಕ್ಷರು.—ಓದಿ ನೋಡಿ, ತೋರಿಸಿ, ಅದರಲ್ಲಿ ಏನು ಇದೆ ಎಂದು. The mover has moved; the Minister has replied; I will try to accommodate the member. But if he wants to spend time in this manner, the hon. Member is at liberty to do so and I will not come in his way. Let him have a little patience and I will try to give him a chance.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ ಅಧ್ಯಕ್ಷರೇ, ಈಗ ತಾನೆ ಆಹಾರದ ಕೊರತೆ, ರಾಜ್ಯದಲ್ಲಿ ಒದಗಿರತಕ್ಕಂತಹ ಅಭಾವ ಪರಿಸ್ಥಿತಿ, ಈ ವಿಷಯದ ಮೇಲೆ ಚರ್ಚೆ ನಡೆದು, ಆಹಾರ ಮಂತ್ರಿಗಳು ಉತ್ತರದಲ್ಲಿ ಹೇಳಿದರು, ನಾವು ಏನೇನೋ ಕೆಲಸ ಮಾಡಿದ್ದೇವೆ ಆಹಾರ ಎಷ್ಟೋ ಒದಗಿಸಿದ್ದೇವೆ, ಕಾಂಟೂರ್ ಬಂಡಿಂಗ್, ಸಾಯಿಲ್ ಕನ್‌ಸರ್‌ವೇಶನ್, ಡಿಸಿಲ್ಟಿಂಗ್ ರೆಸ್ಟೋರೇಶನ್ ಆಫ್ ಟ್ಯಾಂಕ್ಸ್, ಹಾಗೂ ಇನ್ನೂ ಅನೇಕ ವಿಧವಾದ ಕೆಲಸಕಾರ್ಯಗಳನ್ನು ಮಾಡಿದ್ದೇವೆ ಎಂದು.

ಸ್ವಾಮಿ, ಈ ವಿಷಯ ಹಿಂದೆ ಚರ್ಚೆಯಾದಾಗ ದೇಶದಲ್ಲಿ ದೊಡ್ಡ ಬರಗಾಲ ಬರುತ್ತದೋ ಎನ್ನುವ ಪರಿಸ್ಥಿತಿಯಿತ್ತು. ಒಂದು ಸಾರಿ, ಎರಡು ಸಾರಿ ಶ್ರೀ ಜತ್ತಿಯವರು ಆ ಕಡೆ ಬಂದು ನೋಡಿಕೊಂಡೂ ಹೋದರು. ಅವರು ಹಾಗೆ ನೋಡಿಕೊಂಡು ಹೋದಮೇಲೆ ಮೈಸೂರು ದೇಶದಲ್ಲೂ ಬರಗಾಲದ ಹತ್ತಿರ ಹತ್ತಿರ ಜನ ಇದ್ದಾರೆ, ಹೆಚ್ಚಿನ ಸಂಕಟಕ್ಕೆ ಸಿಕ್ಕಿರುವ ಜನ ಇದ್ದಾರೆ ಎಂದು ಕೇಂದ್ರಕ್ಕೂ ಮನವರಿಕೆಯಾಗಿ, ಪ್ಲಾನಿಂಗ್ ಕಮಿಷನ್ನಿಗೂ ಅವರು ಹೇಳಿದ್ದರ ಮೇಲೆ ಕೇಂದ್ರದಿಂದ ಎಷ್ಟು ಸಹಾಯ ಬರಬಹುದೋ ಅಷ್ಟೂ ಬಂತು. ರಾಜ್ಯ ಸರ್ಕಾರದವರೂ ಇಲ್ಲಿನ ಜನರಿಗೆ ಅನ್ನ ಆಹಾರ ಕೊಟ್ಟು ನೆರವು ನೀಡಿತು. ಎಲ್ಲಾ ಕಡೆಗಳಲ್ಲೂ ಆಯಿಲ್ ಇಂಜಿನ್‌ಗಳನ್ನು ಕೊಟ್ಟು ಮೈನರ್ ಇರಿಗೇಷನ್ ಕೆಲಸಗಳನ್ನು ಕೈಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟು ಸರ್ಕಾರದವರು ಎಷ್ಟೋ ಆಯಿಲ್ ಎಂಜಿನ್‌ಗಳನ್ನು ಕೊಂಡುಕೊಟ್ಟರು ಆದರೆ ಇಂದು ನೋಡಿದರೆ ಇವರು ಕಿರ್ಲೋಸ್ಕರ್ ಕಂಪನಿಯಿಂದ ತೆಗೆದು ಒದಗಿಸಿರತಕ್ಕಂಥ ಪಂಪುಗಳು ಒಂದಾದರೂ ಕೆಲಸ ಮಾಡುತ್ತಿಲ್ಲ. ಅವುಗಳಿಂದಾಗಿ ಒಂದು ಎಕರೆಯೂ ಸಹ ಸಾಗುವಳಿಗೆ ಬಂದಿಲ್ಲ. ಸಹಸ್ರಾರು ಪಂಪುಗಳನ್ನು ದೇಶಾದ್ಯಂತ ರೂಢಿಗೆ ತಂದು ದೇಶದಲ್ಲಿರುವ ಆಹಾರಾಭಾವವನ್ನು ನೀಗುತ್ತೇವೆಂದು ಸರ್ಕಾರ ಮಾಡಿದ ಪ್ರಯತ್ನದಿಂದಾಗಿ ಏನೂ ಸಾರ್ಥವಾಗಲಿಲ್ಲ. ಇದರಿಂದ ನೀವು ಆ ಕ್ಷಾಮ ಪೀಡಿತ ಜನರಿಗೆ ಎಷ್ಟು ಸಹಾಯ ಮಾಡಿದ್ದೀರೆಂದು ವೇದ್ಯವಾಗುತ್ತದೆ. ನಮ್ಮ ತಾಲ್ಲೂಕಿಗೆ 14–15 ಪಂಪು ಸೆಟ್ಟುಗಳನ್ನು ಕೊಟ್ಟಿದ್ದರು. 10–15 ಸಾವಿರ ಹಣ ಖರ್ಚು ಮಾಡಿ ತಂದ ಈ ಎಂಜಿನ್‌ಗಳನ್ನು ಇಲ್ಲಿಯವರೆಗೂ ಪೆಟ್ಟಿಗೆಯಿಂದ ಹೊರಗೆ ತೆಗೆದಿಲ್ಲ. ಒಂದು ಎಕರೆ ಭೂಮಿ ಕೂಡ ಉಳುಮೆಯಾಗಿಲ್ಲ. ಆ ಕಡೆಯ ಜನರಿಗೆ ಸರ್ಕಾರ ಯಾವ ರೀತಿಯ ಕೆಲಸವನ್ನೂ ಸಾಕಾದಷ್ಟು ಒದಗಿಸುತ್ತಿಲ್ಲ. ನಮ್ಮ ಪಿ.ಡಬ್ಲ್ಯೂ.ಡಿ. ಇಲಾಖೆ, ರೆವಿನ್ಯೂ ಇಲಾಖೆ, ಎನ್.ಇ.ಎಸ್. ಇಲಾಖೆ—ಈ ಎಲ್ಲಾ ಇಲಾಖೆಗಳೂ ಏನೂ ಕೆಲಸವನ್ನು ಕ್ಷಾಮ ಪೀಡಿತ ಭಾಗದ ಜನರಿಗೆ ಒದಗಿಸುತ್ತಿಲ್ಲವೆಂದು ಗೊತ್ತಾದ ಮೇಲೆ, ಮುಂದೆ ಕೆಲಸ ಮಾಡಿದ ಇಲಾಖೆಯೆಂದರೆ ಸಾಯಿಲ್ ಕಂನ್‌ಸರ್ವೇಷನ್ ಇಲಾಖೆ. ಸಾಯಿಲ್ ಕನ್‌ಸರ್ವೇಷನ್ ಆಕ್ಟ್ ಪ್ರಕಾರ 37ನೆಯ ಸೆಕ್ಷನ್ನಿನಲ್ಲಿ ಡೆಪ್ಯುಟಿ ಕಮಿಷನರಿಗೆ ಮತ್ತು ಡಿವಿಜನಲ್

ಕಮಿಷನರಿಗೆ ಅಧಿಕಾರ ಕೊಟ್ಟಿರುವುದಾಗಿ ಹೇಳಿದೀರಿ. ಅವರು ನೋಟಿಫೈ ಮಾಡಿದರೆ ಯಾರು ತಕರಾರು ಮಾಡುವುದಿಲ್ಲವೆಂದು ಹೇಳಿದ್ದಾರೆ. ಹೀಗಿರುವಲ್ಲಿ ಆ ಪಕ್ಕದಲ್ಲಿ ಒಂದು ಹೆಜ್ಜೆ ಮುಂದೆ ಇಡುವುದು, ಈ ಪಕ್ಕದಲ್ಲಿ ಒಂದು ಹೆಜ್ಜೆ ಮುಂದೆ ಇಡುವುದು ಎಂದು ಮಾಡಿಕೊಂಡು, ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಎಂಬ ನೀತಿಯನ್ನು ಅನುಸರಿಸುತ್ತಿದ್ದೀರಲ್ಲಾ; ಎಲ್ಲಿ ಹಾಹಾಕಾರ ವಿಲ್ಲ ಅಲ್ಲಿ ಕೆಲಸ ನಡೆಸುತ್ತಿದ್ದೀರಿ, ಎಲ್ಲೆಲ್ಲಿ 'ಪುಲ್' ಇದೆ ಅಲ್ಲಿ ತುಂಬಾ ಕೆಲಸ ನಡೆಯುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಯಾವ ಕೆರೆ ಕಟ್ಟೆಯನ್ನು ನೋಡಲಿ, ಒಂದರಲ್ಲಾಗಲೀ ನೀರಿಲ್ಲ. ಈಚೆಗೆ ಬಂದ ಮಳೆಯಿಂದ ಜನರಿಗೆ ಬಹಳ ಅನುಕೂಲವಾಯಿತು, ಪೈರುಗಳು ಉತ್ತಮ ಗೊಂಡಿವೆಯೆಂದು ಅತ್ತ ಕೇಂದ್ರದಲ್ಲಿ ಇಂದಿರಾ ಗಾಂಧಿಯವರೂ, ಇತ್ತ ನಮ್ಮ ಜತ್ತಿಯವರೂ ಹೇಳಿದರು. ಹೈಬ್ರಿಡ್ ಜೋಳ ಬಹಳ ಚೆನ್ನಾಗಿದೆ, ಆಹಾರದ ಅಭಾವ ಸುಧಾರಿಸಿದೆ, ಬೇಕಾದಷ್ಟು ಧಾನ್ಯವನ್ನು ಅಲ್ಲಿಂದ ತರಿಸುತ್ತೇವೆ, ಇಲ್ಲಿಂದ ತರಿಸುತ್ತೇವೆ ಎಂದೆಲ್ಲಾ ಹೇಳಿದರು. ಆದರೆ ಇಂದಿಗೂ ತಾವು ಬಂದು ನೋಡಿ: ತುಮಕೂರು ಜಿಲ್ಲೆಯ ಉತ್ತರ ದಿಕ್ಕಿನ ಯಾವ ಭಾಗದಲ್ಲಿ ತಾವು ಬೇಕಾದರೂ ನೋಡಿ, ಒಂದು ಕೆರೆಯಲ್ಲೂ ನೀರಿಲ್ಲ. ಎಲ್ಲ ಇಂಗಿ ಹೋಗಿದೆ. ದನ ಕುಡಿಯುವುದಕ್ಕೆ ಕೂಡ ನೀರಿಲ್ಲ. ಇಂಥ ಪರಿಸ್ಥಿತಿಯಿರುವಲ್ಲಿ, ನೀವು ಇಂದು ನಮ್ಮ ತಾಲ್ಲೂಕಿನ ಜನರಿಗೆ ಕೂಲಿ ಕೆಲಸಗಳನ್ನು ಒದಗಿಸದೆ ಇದ್ದರೆ, 100ಕ್ಕೆ 75 ಜನರು ಊರು ಬಿಟ್ಟು ಬೇರೆ ಕಡೆಗೆ ಹೋಗಬೇಕಾಗಿ ಬರುತ್ತದೆ. ಇದನ್ನು ತಾವು ದಯವಿಟ್ಟು ಅರ್ಥ ಮಾಡಿಕೊಳ್ಳಬೇಕು. ತಾವೇನು 64ನೆಯ ಹೆಡ್—ಫ್ಯಾಮಿನ್ ರಿಲೀಫ್ ವರ್ಕ್ಸ್‌ನಲ್ಲಿ ಕೆಲಸ ಸೇರಿಸ ಬೇಕೆಂದಿದ್ದೀರೋ ಆ ಒಂದು ಕೆಲಸವೂ ಇಂದು ಅಲ್ಲೇ ನಡೆದಿಲ್ಲ. ಮೊನ್ನೆ ಮೊನ್ನೆ ಕೆಲವು ಮೈನರ್ ಕೆಲಸಗಳನ್ನು ಮಾಡುವುದಕ್ಕೆ ಸಬ್ ಡಿವಿಜನ್ ಆಫೀಸರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಆದರೆ ಮಾತ್ರ ಕೆಲಸವಿನ್ನೂ ನಡೆದಿಲ್ಲ. ಇದುವರೆಗೂ ಸಾಯಿಲ್ ಕನ್‌ಸರ್ವೇಷನಿನವರಿಂದಾಗಿ ಅಲ್ಲಿನ ಅನೇಕ ಜನರ ಪ್ರಾಣಗಳನ್ನು ಉಳಿಸುವುದ ಕ್ಕಾಗಿದೆಯೇ ವಿನಾ, ಪಿ. ಡಬ್ಲ್ಯು.ಡಿ. ಇಲಾಖೆಯವರಿಂದಾಗಲೀ, ಇನ್ನಾವ ಇಲಾಖೆಯವ ರಿಂದಾಗಾಲೀ ಏನೂ ಆಗಿಲ್ಲ.

MR. SPEAKER.—Order, order. Now we have got barely 15 minutes more. Sri P. Venkatagiriyappa says he must get a chance. He contend that he is entitled to it. I must have to give some satisfaction to him. Sri P. Venkatagiriyappa is a member who has not given notice to me that he want to participate and therefore I am prepared to stretch the rule a little because he is a member who has given notice of the resolution and by implication he might say that he is entitled for a chance. If time permits, I will give him 5 or 10 minutes, but I cannot give himt he chance as a mover because once Sri S. Gopal Gowda moved it the hon'ble member Sri P. Venkatagiriyappa cannot become a mover because otherwise everybody who has signed the notice of the motion would say that he is the mover. I cannot have 50 members as movers and give them all chance. After all, the time given is only 2½ hours. That is why I cautioned Sri S. Gopal Gowda at the beginning itself that he has been taking all the time. I can give time only up to 2½ hours.

SRI C. J. MUCKANNAPPA.—Does it mean that the discussion is to close today?

MR. SPEAKER.—I will give full 2½ hours and no time beyond that. I can allow only some clarifications and try to adjust in that way. If you want me to apply the rule strictly, I will have to do it.

SRI K. LAKKAPPA.—Shall I suggest a remedy? Let us hold the clock and get time.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಈ ಸಂದರ್ಭ ಏಕೆ ಹೇಳುತ್ತಿದ್ದೇನೆಂದರೆ, ಸರ್ಕಾರದ ಒಬ್ಬೊಬ್ಬ ಮಂತ್ರಿಗಳಿಗೂ ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ,—ಈ ಹೊತ್ತು ನಮ್ಮ ಕಡೆ ಕೆಲವು ಭಾಗದಲ್ಲಿ ಮಳೆಯಾಗಿದ್ದರೂ ಕೇವಲ ಶೇಕಡ 25ರಷ್ಟು ಜನ ಮಾತ್ರ ಉಳುಮೆ ಮಾಡಿದ್ದಾರೆ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಬಾಕಿ 75 ಜನರು, ಎತ್ತಿಲ್ಲ. ನೇಗಿಲಿಲ್ಲ ಇವೇ ಮುಂತಾದ ಕಾರಣಗಳಿಂದ ಉಳುಮೆ ಮಾಡಿಲ್ಲ. ಸರ್ಕಾರದವರ ದೃಷ್ಟಿ ಇವರ ಕಡೆ ಬೀಳಲಿಲ್ಲ. ಆ ಜನರಿಗೆ ಕೂಲಿನಾಲಿಗೆ ಅವಕಾಶವಿಲ್ಲದೆ ಹೋಗಿ, ನೀವು ಕೊಡುವ ಆಹಾರದಲ್ಲಿ ಒಂದು ಕೆ.ಜಿ.ಯನ್ನು ಸಹಾ ಕೊಳ್ಳುವ ಶಕ್ತಿಯಿಲ್ಲದವರಾಗಿದ್ದಾರೆ. ಗಂಡ ಹೆಂಡತಿ ಮಕ್ಕಳನ್ನು ವಿಸರ್ಜಿಸಿ, ಬದುಕಿದ್ದರೆ ನಾವು ಹೆಂಡತಿ ಮಕ್ಕಳಾಗಿ ಸೇರೋಣ ಎಂದು ಹೇಳಿ, ಊರು ಬಿಟ್ಟು ಹೋಗಿರುತ್ತಾರೆ. ಹೆಂಗಸರು ದಿಕ್ಕುಕಾಣದೆ ಮಕ್ಕಳು ಮರಿಗಳನ್ನು ಕಂಕುಳಲ್ಲಿ ಕಟ್ಟಿಕೊಂಡು ಆಹಾರಕ್ಕಾಗಿ ತಿರುಪೆ ಮಾಡಬೇಕಾಗಿ ಬಂದಿದೆ. 16,000 ಜನರಿರುವ ನಮ್ಮ ತಾಲ್ಲೂಕಿನಲ್ಲಿ 4,000 ಜನ ಇಂದು ತಿರುಪೆಗಾರರಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಆದ್ದರಿಂದ ತಾವು ಸರ್ಕಾರದವರು ಇಂದು ಆಹಾರ ಒದಗಿಸಿದ್ದನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ಏನಾದರೂ ರಿಲೀಫ್ ಕೆಲಸಗಳನ್ನು ಅಲ್ಲಿ ಏರ್ಪಡಿಸಿದ್ದೀರಾ? ಸಾಯಿಲ್ ಕನ್‌ಸರ್ವೇಷನ್ ಸ್ಕೀಮುಗಳನ್ನು ನೀವು ಕೈಕೊಂಡಿರುವ ಬಗ್ಗೆ ಹೇಳುವುದಾದರೆ—ನಾನು ಚಿತ್ರದುರ್ಗದಲ್ಲಿ ನಡೆಯುತ್ತಿರುವುದನ್ನು ನೋಡಿದ್ದೇನೆ, ಜಗಳೂರಿನಲ್ಲಿ ನಡೆದಿರುವುವನ್ನು ನೋಡಿದ್ದೇನೆ, ಚಳ್ಳಕೆರೆಯಲ್ಲಿ ನೋಡಿದ್ದೇನೆ—ಎಲ್ಲ ಕಡೆಯಲ್ಲೂ ಕೆಲಸ ಬೇಕಾದಷ್ಟು ನಡೆಯುತ್ತಿದೆ ಆದರೆ ನಮ್ಮ ಕಡೆ ಏಳು ತಾಲ್ಲೂಕಿಗೆ ಒಂದೇ ಒಂದು ಸಬ್‌ಡಿವಿಜನ್ ಮಾತ್ರ ಇಟ್ಟಿದ್ದೀರಿ. ನಮ್ಮಲ್ಲಿ ಜನ ಇಲ್ಲ ಎಂದು ಹೇಳುವುದಾದರೆ, ಈಗ ಸುಮಾರು ಮೂರೂವರೆ ಸಾವಿರ ಜನ ಸಿವಿಲ್ ಡಿಪಾರ್ಟ್‌ಮೆಂಟಿನಿಂದ ಕೆಲಸವಿಲ್ಲದೆ ಹೊರಬರಲಿದ್ದಾರೆ. ಅವರಲ್ಲಿ ಒಂದು ಸಾವಿರ ಜನರನ್ನು ತಾವು ನೇಮಿಸಿಕೊಳ್ಳಿ. ಈ ಸಯಿಲ್ ಕನ್ಸರ್ವೇಷನ್ ಕೆಲಸವನ್ನು ಅವರಿಗೆ ಕೊಟ್ಟು, ಈ ಕೆಲಸ ಪಿ.ಡಬ್ಲ್ಯು.ಡಿ ಅಥವಾ ರಿವೆನ್ಯೂ ಇಲಾಖೆಯಿಂದ ನಡೆಸುವುದಕ್ಕೆ ಕೊಡಬೇಡಿ, ಅದಕ್ಕೆ ಬದಲು ಅಗ್ರಿಕಲ್ಚರಲ್ ಇಲಾಖೆಯವರಿಂದ ನಡೆಸಲ್ಪಡುವಂತೆ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ತಾವು ಮಾಡಿ, ಆಹಾರ ಸಚಿವರು ಆಹಾರವನ್ನು ಒದಗಿಸಿದರೆ ನಮ್ಮ ತಾಲ್ಲೂಕಿನ ಜನರು ಏನಾದರೂ ಬದುಕಿಕೊಂಡಾರು. ಇಲ್ಲದಿದ್ದರೆ ನಮ್ಮ ಜನರು ಸತ್ತು ಹೋಗುತ್ತಾರೆ. ಈಗಾಗಲೇ ಒಂದೊಂದು ಊರಿನಲ್ಲಿ 160 ಜನಗಳವರೆಗೂ ಸತ್ತುಹೋಗಿದ್ದಾರೆಂದರೆ ಆಶ್ಚರ್ಯವಲ್ಲ. ಪತ್ರಿಕೆಯಲ್ಲಿ ಬಂದಾ ಕ್ಷಣ ಏನು, ಎಂದು ಶ್ರೀ ಜತ್ತಿಯವರು ಹೇಳಿದರು. ನಾನು ಇಲ್ಲೇ ಇರುತ್ತೇನೆ, ಅವರೇ ಖುದ್ದಾಗಿ ನಮ್ಮ ತಾಲ್ಲೂಕಿಗೆ ಹೋಗಿ ವಿಚಾರಿಸಿಕೊಬಹುದು ಬರಲಿ, ಅವರಿಗೇ ವೇದ್ಯವಾಗುತ್ತದೆ. 280 ಮಕ್ಕಳ ಪೈಕಿ 160 ಮಕ್ಕಳು ಸತ್ತುಹೋಗಿರುವ ಸಂದರ್ಭಗಳಿವೆ. ಆ ತಂದೆ ತಾಯಿಗಳನ್ನು ತಮ್ಮ ಮುಂದೆ ಕರೆಸಿ ರುಜುವಾತು ಮಾಡಿಸುವುದಕ್ಕೆ ನಾನು ತಯಾರಿದ್ದೇನೆ. 1945-46ರಿಂದ ಇಲ್ಲಿಯವರೆಗೆ ಅಂಥ ಘೋರ ಕ್ಷಾಮ ಎಂದೂ ನಮ್ಮ ತಾಲ್ಲೂಕಿನಲ್ಲಿ ತಲೆದೋರಿರಲಿಲ್ಲ. ಆದ್ದರಿಂದ ನಾನು ಅತಿ ವಿನಯದಿಂದ ವಿಜ್ಞಾಪನೆ ಮಾಡಿಕೊಳ್ಳುವುದೇನೆಂದರೆ—ಸರ್ಕಾರದವರು ನಮ್ಮ ಸಿರಾ ತಾಲ್ಲೂಕನ್ನು ಉಳಿಸಬೇಕೆಂಬ ಮನಸುಳ್ಳವರಾಗಿದ್ದರೆ, ಈ ಸಮಸ್ಯೆಗೆ ರಾಜಕೀಯ ಬಣ್ಣ ಬಳಿಯದೆ, ಹಚ್ಚಿನ ಅಭಿಮಾನ ಬಿಟ್ಟು ಜನರಿಗೆ ತುರ್ತಾಗಿ ಕೂಲಿ ಕೆಲಸವನ್ನು ಒದಗಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಮೈಸೂರು ರಾಜ್ಯದಲ್ಲಿ ಬರಗಾಲದ ಬೇಗೆಯನ್ನು ಇತ್ತೀಚೆಗೆ ಹತ್ತಾರು ಸಲ ನಾವು ನೋಡಿದ್ದೇವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 18 ವರ್ಷವಾಯಿತು, ಮಾಸ್ಟರ್ ಪ್ಲ್ಯಾನ್ ಮಾಡಿದ್ದಾಯಿತು ಅನೇಕ ಬೃಹತ್ ಯೋಜನೆ ಮಾಡುತ್ತೇವೆಂದು ಹೇಳಿದ್ದು ಆಯಿತು. ಸರ್ಕಾರ ಎಷ್ಟು ಹೇಳಿದರೂ ಜನರಿಗೆ ಸಾಕಷ್ಟು ಆಹಾರ ಒದಗಿಸುವುದು ಆಗಿಲ್ಲ, ಬರಗಾಲ ಪರಿಹಾರ ಆಗಿಲ್ಲ. ಸರ್ಕಾರದ ನೀತಿ ರೀತಿ ನೋಡಿದರೆ ಜನತೆಯ ಕಷ್ಟ ಪರಿಹಾರಕ್ಕೆ ಸೂಕ್ತ ಕ್ರಮ ಸರ್ಕಾರ ತೆಗೆದುಕೊಳ್ಳುತ್ತಿಲ್ಲ ಎಂದು ಹೇಳಬೇಕಾಗುತ್ತದೆ. ನಮ್ಮ ಕೋಲಾರ ಜಿಲ್ಲೆಯ ಪರಿಸ್ಥಿತಿ ಬಗ್ಗೆ ಹೇಳುವುದಾದರೆ, ಇಲ್ಲಿ 12 ಲಕ್ಷ ಜನ ಇದ್ದಾರೆ. ಇದರಲ್ಲಿ ಹರಿಜನರು ಸೇಕಡ 22 ರಷ್ಟು ಇದ್ದಾರೆ. ಈ ದಿವಸ ನಮ್ಮ ಜಿಲ್ಲೆಯಲ್ಲಿ ವ್ಯವಸಾಯ ಕೂಲಿಕಾರರಿಗೆ ಕೆಲಸವಿಲ್ಲದ ಮೂಲಕ ಅನ್ನ ನೀರು ಇಲ್ಲದೆ ಅವರು ಆಂಧ್ರ ಪ್ರದೇಶಕ್ಕೆ ಅನ್ನ ನೀರಿಗಾಗಿ ಅನಂತಪೂರ್ ಜಿಲ್ಲೆಗೆ ಹೋಗುತ್ತಿದ್ದಾರೆ. ಹತ್ತು ಸಾವಿರ ಸಂಸಾರಗಳು ಕೋಲಾರ ಜಿಲ್ಲೆಯಿಂದ ಆಂಧ್ರ ಪ್ರದೇಶಕ್ಕೆ ಹೋಗಿ ಅನ್ನ ನೀರಿಗಾಗಿ ಅಲೆಯುತಕ್ಕಂಥ ಪರಿಸ್ಥಿತಿ ಬಂದಿದೆ. ಇದು ನಮ್ಮ ಜಿಲ್ಲೆಯ ದೌರ್ಭಾಗ್ಯ. ನಮ್ಮ ಜಿಲ್ಲೆಯ ಇಬ್ಬರು ಮಂತ್ರಿಗಳು ಇಂದು ಮಂತ್ರಿಮಂಡಳದಲ್ಲಿ ಇದ್ದರೂ ಕೂಡ ಏನೂ ಉಪಯೋಗವಾಗಿಲ್ಲ. ಒಂದೆರಡು ದಿನಗಳಲ್ಲಿ ಮಳೆ ಬಾರದೇ ಹೋದರೆ ಸರ್ವ ನಾಶವಾಗುತ್ತದೆ. ಆದುದರಿಂದ ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಬೇಕು. ಮಂತ್ರಿಗಳು ಹಳ್ಳಿ ಹಳ್ಳಿಗೆ ಹೋಗಿ ಅಲ್ಲಿಯ ನಿಜವಾದ ಪರಿಸ್ಥಿತಿಯನ್ನು ನೋಡಿ ತಿಳಿದುಕೊಂಡು ಸೂಕ್ತ ಕ್ರಮ ಕೂಡಲೇ ತೆಗೆದುಕೊಳ್ಳುವುದಕ್ಕೆ ತಕ್ಕ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ. ಇಂದು ಜನಕ್ಕೆ ತಿನ್ನುವು

ದಕ್ಕೆ ಆಹಾರ ದೊರೆಯುತ್ತಿಲ್ಲ. ಗೆಡ್ಡೆ ಗೆಣಸು ಹಾಗೂ ಈಚಲ ಮರದ ಹಣ್ಣು ತಂದು ಜನ ತಿನ್ನುತ್ತಿದ್ದಾರೆ. ಈ ರೀತಿ ಅವರು ಜೀವನ ಮಾಡುತ್ತಿದ್ದಾರೆ, ರೆವೆನ್ಯೂ ಮಂತ್ರಿಗಳು ಹೇಳುತ್ತಾರೆ ಇದುವರೆಗೆ ಕೋಲಾರ ಜಿಲ್ಲೆಯಲ್ಲಿ 114 ಕೆಲಸಗಳನ್ನು ಮಾಡಲಾಗಿದೆ, ಒಟ್ಟು ಇದುವರೆಗೆ 267 ಕೆಲಸಗಳಾಗಿವೆ ಎಂದು ಹೇಳುತ್ತಾರೆ. ಆದರೆ ನಮ್ಮ ಜಿಲ್ಲೆಯಲ್ಲಿ 500 ಪಂಚಾಯತಿಗಳಿವೆ. ಆದರೆ ಇಷ್ಟು ಪಂಚಾಯತಿಗಳಿಗೆ ಕೆಲಸ ಮಾಡುವುದು ಸಾಧ್ಯವಾಗಿಲ್ಲ. ರಿಲೀಫ್ ವರ್ಕ್ಸ್ ಕೆಲಸ ನಡೆಯುತ್ತಿಲ್ಲ. ಎಲ್ಲಿ ಮುಖಂಡರ ಪ್ರಭಾವ ಇದೆಯೋ ಅಂಥಲ್ಲಿ ಎರಡು ಮೂರು ಕೆಲಸಗಳು ನಡೆದಿವೆ. ಆಹಾರ ಅಭಾವದಿಂದ ಯಾರೂ ಇದುವರೆಗೆ ಸಾಯಲಿಲ್ಲ ಎಂದು ಆಹಾರ ಮಂತ್ರಿಗಳು ಅಪ್ಪಣೆ ಕೊಡಿಸಿದರು. ಆದರೆ ಎಷ್ಟೋ ಜನ ಹೊಟ್ಟೆಗೆ ಅನ್ನವಿಲ್ಲದೆ ಕಾಯಿಲೆ ಬಿದ್ದು ಆಸ್ಪತ್ರೆಗೆ ಸೇರಿ 15-20 ದಿವಸಗಳಲ್ಲಿ ಸಾಯುತ್ತಿದ್ದಾರೆ. ಆದುದರಿಂದ ನಮ್ಮ ಜಿಲ್ಲೆಯಲ್ಲಿ ಕ್ಷಾಮ ಇದೆ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಹೇಳಬೇಕಾದುದು ಏನೆಂದರೆ, ಕೋಲಾರ ಜಿಲ್ಲೆಗೆ ಫ್ಯಾಮಿನ್ ರಿಲೀಫ್‌ಗಾಗಿ 7,75,000 ರೂಪಾಯಿ ಕೊಟ್ಟಿರುವುದರಲ್ಲಿ 1,25,000 ರೂಪಾಯಿ ಖರ್ಚಾಗಿದೆ ಎಂದು ಹೇಳುತ್ತಾರೆ. ಏತಕ್ಕಾಗಿ ಇದಕ್ಕೂ ಹೆಚ್ಚು ಹಣ ಖರ್ಚಾಗಲಿಲ್ಲ ? ಅಧಿಕಾರಿಗಳು ಕೆಲಸ ಸರಿಯಾಗಿ ಮಾಡುತ್ತಿಲ್ಲವೇ ? ಮೈನರ್ ಇರಿಗೇಶನ್ನಿಗೆ ಒದಗಿಸಿದ ಹಣ ಖರ್ಚು ಮಾಡದೇ ಇರುವುದರಿಂದ ಅದು ಲ್ಯಾಪ್ಸ್ ಆಗತಕ್ಕಂಥ ಪರಿಸ್ಥಿತಿ ಬಂದಿದೆ. ಜನರ ಕಷ್ಟ ಪರಿಹಾರ ಮಾಡುವುದಕ್ಕೆ ಸರ್ಕಾರ ಇಲ್ಲವೇ ಎಂದು ಕೇಳಬೇಕಾಗಿದೆ. ಅನ್ನ ಆಹಾರ ಇಲ್ಲದೆ ಜನ ನಮ್ಮ ಜಿಲ್ಲೆ ಬಿಟ್ಟುಕೊಟ್ಟು ಆಂಧ್ರ ಪ್ರದೇಶಕ್ಕೆ ಹೋಗುತ್ತಿದ್ದಾರೆ. ಜನತೆಯ ಈ ಕಷ್ಟ ಪರಿಹಾರ ಮಾಡದೇ ಇದ್ದರೆ ನಾವು ಪ್ರಬಲವಾದ ಹೋರಾಟ ಪ್ರಾರಂಭ ಮಾಡುತ್ತೇವೆ ಎಂದು ಹೇಳಬೇಕಾಗಿದೆ. ಮಾನ್ಯ ಆಹಾರ ಮಂತ್ರಿಗಳ ಮನೆಯ ಎದುರು, ಮಾನ್ಯ ಮುಖ್ಯ ಮಂತ್ರಿಗಳ ಮನೆಯ ಎದುರು ಸತ್ಯಾಗ್ರಹ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ಕೊಟ್ಟು ನನ್ನ ಈ ಎರಡು ಮಾತು ಮುಗಿಸುತ್ತೇನೆ.

† ಶ್ರೀ ಅಂದಾನಯ್ಯ (ಕುಣಿಗಲ್).—ಸ್ವಾಮಿ, ಇಂದು ದೇಶದಲ್ಲಿ ಆಹಾರ ಅಭಾವದಿಂದ ಜನ ಕಂಗೆಟ್ಟು ಊರು ಬಿಟ್ಟು ಬೇರೆ ಊರಿಗೆ ಹೋಗಿ ಬೀದಿ ಬೀದಿ ಅಲೆಯುತ್ತಿದ್ದಾರೆ ಹಾಗೂ ಸಾಯುತ್ತಿದ್ದಾರೆ. ಎಷ್ಟೋ ಜನ ಹೊಟ್ಟೆಗೆ ಅನ್ನವಿಲ್ಲದೆ ಬಾಳೆ ಹಣ್ಣಿನ ಸಿಪ್ಪೆ ತಿನ್ನುತ್ತಿದ್ದಾರೆ. ದೇಶದಲ್ಲಿ ಇಂಥ ಆಹಾರ ಅಭಾವದ ಪರಿಸ್ಥಿತಿ ಬಂದಿರುವಾಗ ಆಹಾರ ಮಂತ್ರಿಗಳು ಹೇಳುತ್ತಾರೆ, ಆಹಾರ ಅಭಾವದಿಂದ ಯಾರೂ ಸಾಯಲಿಲ್ಲ ಎಂದು. ದೇಶಕ್ಕೆ ಸ್ವಾತಂತ್ರ್ಯ ಬಂದು 18 ವರ್ಷವಾಯಿತು. ಇವರು ಅಧಿಕಾರದಲ್ಲಿದ್ದು ಏನು ಸಾಧನೆ ಮಾಡಿದ್ದಾರೆ ! ಜನ ಮಾತ್ರ ಹೊಟ್ಟೆಗೆ ಅನ್ನ ಇಲ್ಲದೆ ಊರೂರು ಅಲೆಯತಕ್ಕಂಥ ಪರಿಸ್ಥಿತಿ ಬಂದಿದೆ. ದೇಶದ ಅಭಿವೃದ್ಧಿ ಕಾರ್ಯ ಸರ್ಕಾರ ಮಾಡಿಲ್ಲ ಎಂದು ಹೇಳಬೇಕಾಗಿದೆ. ಆಹಾರದ ಕೊರತೆ ನೀಗಿಸುವುದಕ್ಕೆ ಯಾವ ಕ್ರಮ ಸರ್ಕಾರ ತೆಗೆದುಕೊಂಡಿಲ್ಲ ಎಂದು ಹೇಳುತ್ತೇನೆ.

6-00 P.M.

ಸ್ವಾಮಿ, ಮಾನ್ಯ ಆಹಾರ ಮಂತ್ರಿಗಳು ಹೇಳಿದರು, ಬೆಂಗಳೂರು ನಗರದಲ್ಲಿ ಮತ್ತು ದೊಡ್ಡ ದೊಡ್ಡ ನಗರಗಳಲ್ಲಿ ಪಡಿತರ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ, ಅವರಿಗೆಲ್ಲ ತಿಂಗಳಿಗೆ 8 ಕೆ.ಜಿ. ದವಸವನ್ನು ಒದಗಿಸುತ್ತಿದ್ದೇವೆ, ಹಳ್ಳಿಗಳಲ್ಲಿ ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದು. ಇವತ್ತು ಪಟ್ಟಣಗಳಲ್ಲಿರುವ ಜನತೆಗೆ ಎಲ್ಲ ಅನುಕೂಲವೂ ಇದೆ. ಅಧಿಕಾರಿಗಳಿಗೆ ಸಂಬಳ ಬರುತ್ತದೆ, ಇತರ ಜನಗಳಿಗೆ ಕೂಲಿ ಸಿಕ್ಕುತ್ತದೆ. ಎಲ್ಲ ಅನುಕೂಲ ಇರುವ ಕಡೆ ಅಂಗಡಿಗಳಲ್ಲಿ ಕೊಂಡುಕೊಂಡು ಜನ ಜೀವನ ಮಾಡುತ್ತಾರೆ, ಅವರಿಗೆ ಆ ಚೈತನ್ಯವಿದೆ. ಆದರೆ ಹಳ್ಳಿಗಳಲ್ಲಿ ರೈತನಿಗೆ ಯಾವ ಆಧಾರವಿದೆ ? ಮಳೆ ಇಲ್ಲದೆ ಇದ್ದರೆ ಯಾವ ಬೆಳೆಯನ್ನೂ ಬೆಳೆಯುವುದಕ್ಕೆ ಆಗುವುದಿಲ್ಲ. ಮಳೆ ಇಲ್ಲದ್ದರಿಂದ ರೈತನು ಯಾವ ಬೆಳೆಯನ್ನು ಇಟ್ಟಿದ್ದನೋ ಅದು ನಷ್ಟವಾಗಿ, ಒಂದು ಸೇರು ಅಕ್ಕಿ ಅಥವಾ ಜೋಳ ಕೊಂಡುಕೊಳ್ಳುವುದಕ್ಕೆ ಚೈತನ್ಯವಿಲ್ಲದವನಾಗಿದ್ದಾನೆ. ತನ್ನಲ್ಲಿದ್ದುದ್ದನ್ನೆಲ್ಲ ಮಾರಿ, ದನಕರುಗಳನ್ನು ಮಾರಿ ರೈತ ಬರಿ ಕೈಯಲ್ಲಿ ಕುಳಿತಿದ್ದಾನೆ. ಹೀಗಿರುವಾಗ ಸರ್ಕಾರದವರು ಹಳ್ಳಿಗಾಡಿನ ಕಡೆ ಆಹಾರವನ್ನು ಒದಗಿಸುವುದಕ್ಕೆ ಏನು ಕ್ರಮ ಕೈಗೊಂಡಿದ್ದಾರೆ ? ಒಂದು ಪಂಚಾಯಿತಿಗೆ, ಒಂದು ಸೊಸೈಟಿಗೆ ತಿಂಗಳಿಗೆ 10—15 ಮೂಟೆ ದವಸವನ್ನು ಕೊಟ್ಟರೆ ಅದನ್ನು ಸಾವಿರಾರು ಜನಗಳಿಗೆ ಹಂಚಬೇಕು ಎಂದರೆ ಜನ ಅದನ್ನು ಹೇಗೆ ತಿಂದು ಜೀವನ ಮಾಡಬೇಕು ! ಹಳ್ಳಿಯ ಜನ ಸರ್ಕಾರದ ಬೆನ್ನು ಮೂಳೆ ಎಂದು ಹೇಳುತ್ತ ಆ ಜನರನ್ನೇ ಕೊಲೆ ಮಾಡುತ್ತಿದ್ದಾರೆಂದು ಘಂಟಾಘೋಷವಾಗಿ ಹೇಳುತ್ತೇನೆ. ಸಾಧ್ಯವಾದಷ್ಟುಮಟ್ಟಿಗೂ ಹಳ್ಳಿಯ ಜನತೆಗೆ ಪ್ರತಿಯೊಂದು ಮನೆಗೂ, ಪ್ರತಿಯೊಂದು ಸಂಸಾರಕ್ಕೂ ಆಹಾರವನ್ನು ಒದಗಿಸುವಂಥ ಏರ್ಪಾಡು ಮಾಡದೆ ಹೋದರೆ ನಿಜವಾಗಿಯೂ

(ಶ್ರೀ ಅಂದಾನಯ್ಯ)

ಅನೇಕ ಜನ ಸಾಯುವುದರಲ್ಲಿ ಸಂದೇಹವಿಲ್ಲ. ಅಲ್ಪಸ್ವಲ್ಪ ಮಳೆ ಬಿದ್ದುದರಿಂದ ಜನತೆ ಸುಖವಾಗಿ ದ್ದಾರೆಂದು ಯಾರೂ ಭಾವಿಸಬಾರದು. ಮಳೆ ಬಿದ್ದಿರುವುದರಿಂದ ಸ್ವಲ್ಪ ನೀರು ಕುಡಿಯುವುದಕ್ಕೆ ಬಂದಿರಬಹುದು. ರೈತನ ಬೆಳೆಯೆಲ್ಲ ನಷ್ಟವಾಗಿ, ಅವನಿಗೆ ಕೂಲಿಯೂ ಸಿಕ್ಕದೆ ಇರುವ ಪರಿಸ್ಥಿತಿ ಒದಗಿದೆ. ರಿಲೀಫ್ ವರ್ಕ್ಸ್ ತೆಗೆಯುಕೊಳ್ಳುತ್ತೇವೆಂದು ಹೇಳಿದರು. ಅದನ್ನು ಕೂಡ ಒಂದೆರಡು ತಿಂಗಳಿನಿಂದ ನಿಲ್ಲಿಸಿದ್ದಾರೆ. ರಿಲೀಫ್ ವರ್ಕ್ ನಡೆಯುವ ಕಡೆ ಜನರಿಗೆ ಕೂಲಿ ಸಿಕ್ಕುತ್ತಿಲ್ಲ. ಆದು ದರಿಂದ ರಿಲೀಫ್ ಕಾಮಗಾರಿಗಳನ್ನು ಆದಷ್ಟು ಬೇಗ ಪ್ರಾರಂಭ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಬೇಕು. ಇಲ್ಲದೆ ಹೋದರೆ ಜನತೆ ಬಹಳ ಕಷ್ಟಕ್ಕೆ ಈಡಾಗಬೇಕಾಗುತ್ತದೆ.

ಸ್ವಾಮಿ, ರೈತನಲ್ಲಿ ಬಿತ್ತನೆ ಬೀಜವಿಲ್ಲ, ಅದನ್ನು ಕೊಂಡುಕೊಳ್ಳಲು ಹಣ ಮೊದಲೇ ಇಲ್ಲ. ಆದ್ದರಿಂದ ರೈತನಿಗೆ ಬೇಕಾದ ಬಿತ್ತನೆ ಬೀಜ ಮತ್ತು ಗೊಬ್ಬರ ಇತ್ಯಾದಿಗಳನ್ನು ಮುಫತ್ತಾಗಿ ಒದಗಿ ಸುವುದಕ್ಕೆ ಏರ್ಪಾಡು ಮಾಡಬೇಕು. ದುರದೃಷ್ಟವಶಾತ್, ಕಷ್ಟಪಟ್ಟು ಬಿತ್ತನೆ ಮಾಡಿದ ಬೆಳೆಯೆಲ್ಲ ನಾಶವಾಗಿದೆ. ಕೆಲವು ತರಹ ಕೀಟಗಳು ಅಲ್ಪಸ್ವಲ್ಪ ಆಗಿದ್ದ ಬೆಳೆಯನ್ನೂ ನಾಶ ಮಾಡಿವೆ. ಆದ್ದರಿಂದ ಸರ್ಕಾರದವರು ಬಿತ್ತನೆ ಬೀಜ, ಗೊಬ್ಬರ ಇತ್ಯಾದಿಗಳನ್ನು ಮುಫತ್ತಾಗಿ ಒದಗಿಸುವುದಲ್ಲದೆ ಪೈರುಪಚ್ಚೆಗಳಿಗೆ ಬೀಳುವ ಕೀಟಗಳನ್ನು ನಾಶಪಡಿಸುವುದಕ್ಕೆ ಕ್ರಿಮಿನಾಶಕಗಳನ್ನೂ ಒದಗಿಸಬೇ ಕೆಂದು ನಾನು ಆಹಾರ ಮಂತ್ರಿಯವರಲ್ಲಿ ಕೇಳುತ್ತಿದ್ದೇನೆ.

ನಮ್ಮ ರಾಜ್ಯದಲ್ಲಿ ಕಾಳಸಂತೆ ವ್ಯಾಪಾರ ಹೆಚ್ಚಾಗಿದೆ, ಆಹಾರ ಧಾನ್ಯಗಳನ್ನು ಬಚ್ಚಿಟ್ಟಿದ್ದ ಪ್ರಕರಣಗಳನ್ನು ಪತ್ತೆಹಚ್ಚಲಾಯಿತು, ಇಷ್ಟು ಜನರನ್ನು ಹಿಡಿಯಲಾಯಿತು ಎಂದು ಮಾನ್ಯ ಆಹಾರ ಮಂತ್ರಿಗಳು ಹೇಳುತ್ತಾರೆ. ಕೆಲವು ಜನ ಕಾಳಸಂತೆಕೋರರು ಆಹಾರಾಭಾವದ ಪರಿಸ್ಥಿತಿಯನ್ನು ದುರುಪಯೋಗ ಮಾಡಿಕೊಂಡು ಲಕ್ಷಾಂತರ ರೂಪಾಯಿ ಗಳಿಸಿದ್ದಾರೆ. ಪಂಜಾಬ್ ರಾಜ್ಯದಲ್ಲಿ ಯಾವ ರೀತಿ ಕಾನೂನನ್ನು ಜಾರಿಗೆ ತಂದು ಕಾಳಸಂತೆ ಮಾಡತಕ್ಕ ಜನರನ್ನು, ಅವರಿಗೆ ಬೇಡಿ ಹಾಕಿ ದೊಡ್ಡ ದೊಡ್ಡ ರಸ್ತೆಗಳಲ್ಲಿ ಮೆರವಣಿಗೆ ಮಾಡಿ ತೆಗೆದುಕೊಂಡು ಹೋಗಿ ಉಗ್ರವಾದ ಶಿಕ್ಷೆಯನ್ನು ಕೊಟ್ಟರು, ಅದೇ ರೀತಿ ನಮ್ಮ ರಾಜ್ಯದಲ್ಲಿಯೂ ಕೂಡ ಕಾಳಸಂತೆ ಮಾಡುವವರಿಗೆ ಉಗ್ರವಾದ ಶಿಕ್ಷೆ ಯನ್ನು ಕೊಡದೆ ಹೋದರೆ ನಮ್ಮ ದೇಶದಲ್ಲಿ ಯಾರಿಗೂ ಉಳಿಗಾಲವಿಲ್ಲ; ನಮ್ಮ ದೇಶದ ಬಡತನ ನೀಗುವುದಿಲ್ಲ. ಇಂಥ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಆಹಾರ ಮಂತ್ರಿಯವರನ್ನು ಕೇಳಿ ಕೊಳ್ಳುತ್ತೇನೆ.

ಸ್ವಾಮಿ, ನಮ್ಮ ಸರ್ಕಾರ ಅನುಸರಿಸುತ್ತಿರುವ ಆಹಾರ ಸರಬರಾಜು ನೀತಿಯನ್ನು ನೋಡಿದರೆ ತೆನಾಲಿ ರಾಮಕೃಷ್ಣನ ಕಥೆ ಜ್ಞಾಪಕಕ್ಕೆ ಬರುತ್ತದೆ. ಆಗಿನ ಕಾಲದಲ್ಲಿ ಒಬ್ಬ ಅಧಿಕಾರಿ ಎಲ್ಲರಿಗೂ ಕೊಟ್ಟಂತೆ ತೆನಾಲಿ ರಾಮಕೃಷ್ಣನಿಗೂ ಒಂದು ಕುದುರೆಯನ್ನು ಕೊಟ್ಟು ಪ್ರತಿದಿನವೂ ಎರಡು ಹೊತ್ತೂ ಅದಕ್ಕೆ ಸರಿಯಾಗಿ ಹುಲ್ಲು, ನೀರು ತೋರಿಸು ಎಂದು ಹೇಳಿ ಕೊಟ್ಟನಂತೆ. ತೆನಾಲಿ ರಾಮಕೃಷ್ಣನು ಕುದುರೆಯನ್ನು ತೆಗೆದುಕೊಂಡು ಹೋಗಿ ಮನೆಯ ಹಿಂದುಗಡೆ ಅದಕ್ಕಾಗಿಯೇ ಒಂದು ಕೋಣೆಯನ್ನು ಕಟ್ಟಿಸಿ ಅದಕ್ಕೆ ಒಂದು ಕಡೆ ಮಾತ್ರ ಸಣ್ಣ ಕಿಟಕಿಯನ್ನಿಟ್ಟು ಅದರ ಮುಖಾಂತ ರವಾಗಿ ಪ್ರತಿ ದಿನವೂ ಎರಡು ಹೊತ್ತೂ ಹುಲ್ಲು ಮತ್ತು ನೀರು ತೋರಿಸುತ್ತ ಇದ್ದನಂತೆ. ಹೀಗಿರಲು ಒಂದು ದಿವಸ ಯಜಮಾನನಾದವನು ಕುದುರೆಗಳನ್ನು ನೋಡುತ್ತ ಬಂದು ತೆನಾಲಿ ರಾಮಕೃಷ್ಣನ ಮನೆಗೂ ಬಂದನಂತೆ. ರಾಮಕೃಷ್ಣನು ಕೋಣೆಯಲ್ಲಿದ್ದ ಕುದುರೆಯನ್ನು ತೋರಿಸಿದನಂತೆ. ಯಜಮಾನನಾದವನು ಕಿಟಕಿಯ ಮೂಲಕ ತನ್ನ ತಲೆಯನ್ನು ಒಳಕ್ಕೆ ಇಟ್ಟು ಕುದುರೆಯನ್ನು ನೋಡಲು ಪ್ರಯತ್ನ ಮಾಡಿದಾಗ ಆ ಕುದುರೆಯು ಯಜಮಾನನ ಗಡ್ಡವನ್ನು ಬಾಯಲ್ಲಿ ಕಚ್ಚಿ ಹಿಡಿದು ಕೊಂಡಿತು. ಈ ರೀತಿ ನಮ್ಮ ಸರ್ಕಾರ ಜನಗಳಿಗೆ ಆಹಾರ ಸರಬರಾಜನ್ನು ಮಾಡುತ್ತಿದೆ 1967ನೇ ಇಸವಿಯಲ್ಲಿ ನಡೆಯುವ ಚುನಾವಣೆಯಲ್ಲಿ ಇವರಿಗೆ ನಿಜವಾಗಿಯೂ ಜನತೆ ಬುದ್ಧಿ ಕಲಿಸುತ್ತದೆ.

ನಮ್ಮ ಮಂತ್ರಿಗಳು ಅನೇಕ ಕಡೆ ಸಂಚಾರ ಮಾಡಿ ಆ ಕೆಲಸ ಮಾಡಿದೆವು, ಈ ಕೆಲಸ ಮಾಡಿದೆವು ಎಂದು ಹೇಳಿಕೊಂಡು ಬರುತ್ತಾರೆ. ಇವರು ಯಾವ ಕೆಲಸ ಮಾಡುತ್ತಿದ್ದಾರೆ ಎಂದರೆ, ಎಲ್ಲಿ ಯಾರು ಕಾಂಗ್ರೆಸ್ಸಿಗೆ ವಿರೋಧವಾಗಿ ಕೆಲಸ ಮಾಡಿದ್ದಾರೆ ಅಂಥವರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡಿ ಅವರನ್ನು ದಸ್ತಗಿರಿ ಮಾಡುವ ಪ್ರಯತ್ನ ಮಾಡುತ್ತಾರೆ; ಅವರ ಮನೆ ಶೋಧನೆ ಮಾಡುತ್ತಾರೆ. ಸಣ್ಣ ಸಣ್ಣ ವಿಷಯಗಳಲ್ಲಿ ಕೈಹಾಕಿ ನಮ್ಮ ಮಂತ್ರಿಮಂಡಲದ ಅನೇಕ ಜನ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ಕುಣಿಗಲ್ ತಾಲ್ಲೂಕು ಅಮೃತೂರು ನೆಹರೂ ಹೈಸ್ಕೂಲು ಕಮಿಟಿಯ ಅಧ್ಯಕ್ಷತೆಯನ್ನು ಈ ಸಭೆಯ ಮಾನ್ಯ ಸದಸ್ಯರೂ ಮತ್ತು ಮಾಜಿ ಮುಖ್ಯ ಸಚೇತಕರೂ ಆದವರು ವಹಿಸಿದ್ದಾಗ ಒಬ್ಬ ಪೋಲೀಸ್ ಅಧಿಕಾರಿ

ಯಾವುದೇ ಒಂದು ಕೋರ್ಟ್ ಆರ್ಡರ್ ಅಥವಾ ಸುಪೀರಿಯರ್ ಆಫೀಸರ್ ಆರ್ಡರಿಲ್ಲದೆ ಆ ಸ್ಥಳಕ್ಕೆ ಅಕ್ರಮ ಪ್ರವೇಶ ಮಾಡಿ ಪ್ರೊಸೀಡಿಂಗ್ಸ್ ಪುಸ್ತಕವನ್ನು ಕಿತ್ತುಕೊಂಡು ಹೋಗಿದ್ದಾರೆ. ಇಂಥ ಒಂದು ಪ್ರಸಂಗ ನಮ್ಮ ಮಂತ್ರಿಮಂಡಲದ ಬೆಂಬಲದಿಂದ ನಡೆದಿದೆ. ಸರ್ಕಾರದವರು ಇಂಥ ವಿಷಯಗಳಿಗೆ ಗಮನ ಕೊಡದೆ, ಮುಖ್ಯವಾಗಿ ದೇಶದ ಮುಂದೆ ಇರುವ ಆಹಾರದ ಅಭಾವವನ್ನು ಹೋಗಲಾಡಿಸುವುದಕ್ಕೆ ಏನು ಮಾಡಬೇಕೋ ಅದನ್ನು ಬಿಟ್ಟು ಜನತೆಗೆ ಕಿರುಕುಳ ಕೊಡುತ್ತಿದೆ. ಇಂಥ ಸರ್ಕಾರಕ್ಕೆ ನಿಜವಾಗಿಯೂ ಜನತೆ ಬುದ್ಧಿ ಕಲಿಸಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜಿ. ರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಬೆಂಗಳೂರು ಜಿಲ್ಲೆಯು ಬರಗಾಲಕ್ಕೆ ಆಹುತಿ ಯಾದ ಜಿಲ್ಲೆ. ಈ ಜಿಲ್ಲೆಯಲ್ಲಿ ಬಡತನ ಜನಗಳು ಆಹಾರವಿಲ್ಲದೆ ನರಳುತ್ತ ಅನೇಕ ಮಂದಿ ಸತ್ತಿರ ತಕ್ಕದ್ದು ನಮ್ಮ ದುರದೃಷ್ಟ, ಮಾನ್ಯ ಆಹಾರಮಂತ್ರಿಗಳು ನಿನ್ನೆತಾನೇ ಒಂದು ಪ್ರಶ್ನೆಗೆ ಉತ್ತರ ಹೇಳುವಾಗ ನಾವೇನೋ ಸಾಕಷ್ಟು ಆಹಾರ ಪದಾರ್ಥಗಳನ್ನು ಕೊಡುತ್ತಿದ್ದೇವೆ, ಜಿಲ್ಲಾಧಿಕಾರಿಗಳು ಕೇಳದೆ ಇದ್ದರೆ ನಮ್ಮ ತಪ್ಪಲ್ಲ ಎಂದರು. ಅದನ್ನು ಖಂಡಿತವಾಗಿ ನಾನು ಒಪ್ಪುವುದಿಲ್ಲ ಜಿಲ್ಲಾಧಿ ಕಾರಿಗಳು ಸಾಕಷ್ಟು ಆಹಾರ ಪದಾರ್ಥಗಳನ್ನು ಅವರ ಜಿಲ್ಲೆಗೆ ಕೇಳದೆ ಇದ್ದರೆ ಅಂಥವರನ್ನು ಕೆಲಸ ದಿಂದ ತೆಗೆಯಬೇಕು, ಇಲ್ಲವೇ ತಮ್ಮ ಕೈಯಲ್ಲಿ ಸಾಧ್ಯವಿಲ್ಲ ಎಂದಾದರೂ ಹೇಳಬೇಕು. ಸಾಕಷ್ಟು ರಿಲೀಫ್ ವರ್ಕ್ಸ್ ಮಾಡುವುದಕ್ಕೋಸ್ಕರ ಹಣವನ್ನು ಕೊಟ್ಟಿದ್ದೇವೆ, ಅದನ್ನು ಸಂಬಂಧಪಟ್ಟ ಅಧಿಕಾರಿ ಗಳು ಖರ್ಚು ಮಾಡದೆ ಇದ್ದರೆ ನಾವು ಏನು ಮಾಡುವುದು ಎಂದು ರೆವೆನ್ಯೂ ಮಂತ್ರಿಗಳು ಹೇಳಿದರು. ಈ ರೀತಿ ಬೇಜವಾಬ್ದಾರಿಯುತವಾದ ಉತ್ತರಗಳನ್ನು ಹೇಳಿದರೆ, ಜನಗಳು ಸಾಯುತ್ತ ಇರುವಾಗ ಅವರುಗಳ ಹಿತ ಮತ್ತು ಸಂರಕ್ಷಣೆ ನಿಜವಾಗಿಯೂ ಸರ್ಕಾರದ ಜವಾಬ್ದಾರಿಯಲ್ಲವೇ ಎಂದು ನಾನು ಪ್ರಶ್ನೆ ಮಾಡಲು ಇಚ್ಛಿಸುತ್ತೇನೆ.

ಆಹಾರ ಮಂತ್ರಿಗಳು ಬೆಂಗಳೂರು ಜಿಲ್ಲೆಯಲ್ಲಿ ಯಾವ ಮೂಲೆಗಾದರೂ ಹೋಗಿ ಆಹಾರ ಪದಾರ್ಥ ಇದೆಯೋ ಇಲ್ಲವೇ ಎಂದು ವಿಚಾರ ಮಾಡಿರುವರೇ ಎಂದು ನಾನು ಪ್ರಶ್ನೆಮಾಡುತ್ತೇನೆ. ಮೈಸೂರು ದೇಶದಲ್ಲಿ ಆಹಾರದ ವಿತರಣೆ ಹೇಗಿದೆ ಎಂದು ಯಾವುದಾದರೂ ಗ್ರಾಮಕ್ಕೆ ಹೋಗಿ ಅಲ್ಲಿ ಜನರನ್ನು ಸಾಲಾಗಿ ನಿಲ್ಲಿಸಿ ಬೇಕಾದಷ್ಟು ಆಹಾರ ಹಂಚುತ್ತಿದ್ದೇವೆ ಎಂದು ತೋರಿಸಿದರೆ ಉಪಕಾರ ವಾಗುವುದಿಲ್ಲ, ಪ್ರತಿಯೊಂದು ಗ್ರಾಮಕ್ಕೂ ರೇಷನ್ ಕೊಡುವ ವ್ಯವಸ್ಥೆ ಮಾಡುವುದಾಗಿ ಮಂತ್ರಿಗಳು ಭರವಸೆ ಕೊಟ್ಟಿದ್ದರು. ಒಂದು ತಾಲ್ಲೂಕಿನಲ್ಲಿ 35 ಗ್ರಾಮಗಳಿದ್ದರೆ 25ಗ್ರಾಮಗಳಿಗೆ ಸಾಮಾನ್ಯ ವಾಗಿ ಆಹಾರವನ್ನು ಹಂಚಿಲ್ಲ. ಪಟ್ಟಣಗಳಿಗೆ, ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೆ ಗಲಾಟೆ ಮಾಡುವ ವರಿಗೆ ಆಹಾರಒದಗಿಸುತ್ತಿರುವರೇ ವಿನಾ ಇತರರಿಗೆ ದೊರೆಯುತ್ತಿಲ್ಲ. ಜನರಿಗೆ ಕೆಲಸವಿಲ್ಲದೆಒದ್ದಾಡು ತ್ತಿದ್ದಾರೆ, ಕೆಲಸಮಾಡುವವರಿಗೆ ಆಹಾರಪದಾರ್ಥಗಳಿಲ್ಲ. ಇದಕ್ಕೆಗಮನಕೊಡಬೇಕು. ಈದಿವಸ ಇನ್ನೂ 3 ತಿಂಗಳಕಾಲ ಜನರಿಗೆ ಮತ್ತು ದನಗಳಿಗೆ ಆಹಾರ ಮತ್ತು ಹುಲ್ಲನ್ನು ಒದಗಿಸಲು ವ್ಯವಸ್ಥೆಮಾಡಬೇಕಾ ಗಿದೆ. ಯಾವುದೋ ಒಂದು ಊರಿಗೆ ಒಂದು ಲಾರಿ ಹುಲ್ಲನ್ನು ಕೊಟ್ಟು ಹುಲ್ಲನ್ನೊದಗಿಸಿದ್ದೇವೆ ಎಂದು ಹೇಳಿದರೆ ಒಂದು ಲಾರಿ ಹುಲ್ಲು ಎಷ್ಟು ದನಗಳಿಗೆ ಸಾಕಾಗುತ್ತದೆ ಎಂಬುದನ್ನು ಹೇಳಬೇಕು. ಒಂದು ಲಕ್ಷ 25 ಸಾವಿರ ಜನರಿರುವ ಒಂದು ತಾಲ್ಲೂಕಿಗೆ ತಲೆಗೆ 5 ಕೆ.ಜಿ. ಪ್ರಕಾರ ಕೊಡುತ್ತೇವೆಂದು ಹೇಳುವಾಗ ಒಂದು ತಿಂಗಳಿಗೆ 90 ಟನ್ ಗೋಧಿ ಕೊಟ್ಟು ಸುಧಾರಿಸುತ್ತೇವೆಂದು ಹೇಳುವುದು ಯಾವ ಲೆಕ್ಕವೋ ಅರ್ಥವಾಗುವುದಿಲ್ಲ. ಒಂದೊಂದು ತಾಲ್ಲೂಕಿಗೆ 40 ಸಾವಿರ ರೂಪಾಯಿ ಹಣ ಕೊಟ್ಟಿದ್ದಾರೆ. ರೆವೆನ್ಯೂ ಇನ್‌ಸ್ಪೆಕ್ಟರು, ಸೂಪರ್‌ವೈಜರು ಅಂದಾಜುಮಾಡಿ ಅಸಿಸ್ಟೆಂಟ್ ಇಂಜಿನಿ ಯರು ಸ್ಕ್ರೂಟಿನಿ ಮಾಡಿ ಅಲ್ಲಿಂದ ಅಸಿಸ್ಟೆಂಟ್ ಕಮಿಷನರ ಆಫೀಸಿಗೆ ಹೋಗಿ ಜಿಲ್ಲಾಧಿಕಾರಿಗಳು ಮಂಜೂರು ಮಾಡಿದಮೇಲೆ ಕೆಲಸ ತೆಗೆದುಕೊಳ್ಳಬೇಕಾಗುತ್ತದೆ. ಇದು ಈಗಿರುವ ಪದ್ಧತಿ. ಯಾವ ರಾಜ್ಯದಲ್ಲಿ ಈ ರೀತಿ ಮಾಡಲು ಸಾಧ್ಯ? ಮಂತ್ರಿಗಳು ಮಾಡಿ ತೋರಿಸಲಿ. ಕೆರೆಗಳಲ್ಲಿ ಹೂಳು ತೆಗೆ ಯುವ ಕೆಲಸಕ್ಕೆ ಮೊದಲನೆಯ ಪ್ರಾಶಸ್ತ್ಯ ಕೊಡಲಾಗುತ್ತಿದೆ ಎಂದು ಹೇಳುತ್ತಾರೆ, ಆ ಕೆಲಸ ನಿಧಾನವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಬಾವಿ ತೆಗೆಯಬೇಕಾದರೆ ಒಂದು ಕ್ವೆರಿ, 64 ಫ್ಯಾಮಿನ್ ಎಂಬ ಹೆಡ್ಡಿನಲ್ಲಿ ಮೂರು ಬಾಬುಗಳನ್ನು ಸೇರಿಸಿ ಹಣ ಖರ್ಚು ಮಾಡುವುದಕ್ಕೆ ಸಾಧ್ಯ ವಿಲ್ಲ ಎಂದು ತಿಳಿಸುವುದಕ್ಕೆ ಒಂದು ತಿಂಗಳು 20 ದಿವಸಗಳಾದುವು. ಹೀಗಾದರೆ ಹೇಗೆ ಖರ್ಚು ಮಾಡುವುದು ? ಯಾರೂ ಮಾಡಲು ಸಾಧ್ಯವಿಲ್ಲ. ಕೆಲಸ ಕೊಡುವ ವಿಧಾನ ಇದು. ಈ ವಿಚಾರದಲ್ಲಿ ಎಲ್ಲಾ ಮಂತ್ರಿಗಳಿಗೂ ಜಿಲ್ಲಾಧಿಕಾರಿಗಳಿಗೂ ಕಾಗದ ಬರೆದರೆ ಜವಾಬೇ ಇಲ್ಲ. ಹೀಗಾದರೆ ಪರಿಸ್ಥಿತಿ ಹೇಗೆತಾನೆ ಸುಧಾರಿಸೀತು ? ಬೆಂಗಳೂರು ಜಿಲ್ಲೆಯಲ್ಲಿ ರೈತರು ಪಡುವ ಕಷ್ಟ ಹೇಳತೀರದು. ಆಹಾರ ವಿತರಣೆ ಮುಂತಾದುವುಗಳಿಗೆ ನಿಯಮವಿದೆ. ಲೈಸನ್ಸ್ ಇಲ್ಲದೆ ವಿತರಣೆ ಮಾಡಬಾರದು. ಲೈಸೆನ್ಸ್ ಕೊಡಲು ಮೂರು ಜನರಿದ್ದರೂ ಕೂಡ ಬೇಗ ಲೈಸೆನ್ಸ್ ಕೊಟ್ಟಿಲ್ಲ. ಹೀಗಾದರೆ ಹೇಗೆ ವಿತರಣೆ

(ಶ್ರೀ ಜಿ. ರಾಮೇಗೌಡ)

ಮಾಡುವುದು ಎಂಬುದನ್ನು ಸ್ವಲ್ಪ ಯೋಚನೆಮಾಡಿ. ಜಿಲ್ಲಾಧಿಕಾರಿಗಳು ಸರಕಾರದ ಮಾತು ಕೇಳ ದಿದ್ದರೆ ಸಾರ್ವಜನಿಕರೆದುರಿನಲ್ಲಿ ಅವರನ್ನು ನೇಣುಹಾಕಿ. ಒಂದು ಅರ್ಜಿಹಾಕಿ ವಿತರಣೆ ಮಾಡಲು ಲೈಸೆನ್ಸ್ ಕೊಡಿ ಎಂದರೆ ಎಷ್ಟು ತಿಂಗಳು ಬೇಕು ಅದಕ್ಕೆ? ಹೀಗಾದರೆ ಹೇಗೆ ಆಹಾರದ ವಿತರಣೆ ಮಾಡಲು ಸಾಧ್ಯ? ಒಂದು ಅಂದಾಜು ಮಾಡಿ ಮೇಲಕ್ಕೆ ಕಳಿಸಿದರೆ ಅದು ಜಿಲ್ಲಾಧಿಕಾರಿ ಗಳಿಗೆ ಹೋಗಿ ಮಂಜೂರು ಆಗಿ ಬಂದು ಕೆಲಸವಾಗಬೇಕಾದರೆ ಎಷ್ಟೋ ತಿಂಗಳು ಕಾಯಬೇಕು, ಜಾಗ್ರತೆ ಉತ್ತರ ಬರುವುದಿಲ್ಲ. ಹಣ ಮತ್ತು ಕೊಡುವ ಸಹಾಯ ಸಕಾಲದಲ್ಲಿ ಜನತೆಗೆ ಉಪಯೋಗ ವಾಗಬೇಕಾದರೆ, ಆಹಾರ ಪದಾರ್ಥಗಳು ಸರಿಯಾಗಿ ಜನತೆಗೆ ದೊರೆಯಬೇಕಾದರೆ ಕಾನೂನು ಅಡ್ಡ ಬಂದರೆ ಅದನ್ನು ತಪ್ಪಿಸಬೇಕು. ಜನರು ಸಾಯುತ್ತಿರುವಾಗ ಹಾಗಾದರೂ ಮಾಡಿದರೆ ಸ್ವಲ್ಪ ಸಮಾಧಾನವಾಗುತ್ತದೆ. ಹಾಗೆ ಮಾಡದೆ ಇದ್ದರೆ 70 ವರ್ಷದ ಮೇಲ್ಪಟ್ಟವರು ಯಾರಾದರೂ ಸತ್ತರೆ ಅದಕ್ಕೆ ಜತ್ತಿಯವರೇ ಜವಾಬ್ದಾರರಾಗಬೇಕಾಗುತ್ತದೆ. ವಾರಕ್ಕೆ ಅವರಿಗೆ ಎಷ್ಟು ಕೆ. ಜಿ. ಧಾನ್ಯ ಕೊಟ್ಟಿದ್ದಾರೆ? 700 ಜನರಿಗೆ 70 ವರ್ಷವಾಗಿದೆ, 69 ವರ್ಷವಾಗಿರುವವರಿಗೆ ಸಹಾಯ ನೀಡುವು ದಿಲ್ಲವೆಂದು ಹೇಳಿದ್ದಾರೆ, 70 ವರ್ಷವಾಗದಿದ್ದರೆ ಅದು ಅವರ ತಪ್ಪೇ? ಹೀಗಾದರೆ ಕಾನೂನು ಗಳಿಂದ ಪ್ರಯೋಜನ ವಾಗುವುದಿಲ್ಲ. ಬೇಕಾದರೆ ಕರೆದುಕೊಂಡು ಹೋಗಿ ಸಾಯುವ ಸ್ಥಿತಿಯಲ್ಲಿ ರುವವರನ್ನು ತೋರಿಸುತ್ತೇನೆ. ಕಾನೂನನ್ನು ಸರಿಯಾಗಿ ನಡೆಸುವುದಾದರೆ ನಡೆಸಿ. ಜನರು ಮತ್ತು ದನಗಳು ಸಾಯುವುದನ್ನು ನೋಡಿ, ಡಿಪೋ ಇಲ್ಲದಿರುವುದನ್ನು, ಕೆಲಸವಿಲ್ಲದೆ ಒದ್ದಾಡುತ್ತಿರುವವ ರನ್ನು ನೋಡಿ, ನಾಳೆ ಮಧ್ಯಾಹ್ನ ಬರುವುದಾದರೆ ನನ್ನ ಖರ್ಚಿನಲ್ಲಿ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಇರುವ ಪರಿಸ್ಥಿತಿಯನ್ನು ತೋರಿಸುತ್ತೇನೆ. ಸರಿಯಾಗಿ ನೋಡಿ ಸೂಕ್ತ ಕ್ರಮ ಕೈಕೊಳ್ಳ ದಿದ್ದರೆ ಪ್ರಯೋಜನವೇನು? ನಾವು ಇಲ್ಲಿ ಬಂದು ಹೇಳುವುದು, ನೀವು ಕೇಳಿ ಸುಮ್ಮನಾಗುವುದು, ಇದ ರಿಂದ ಜನರಿಗೆ ಸಹಾಯವಾಗುವುದಿಲ್ಲ. ಜನರೂ ಮತ್ತು ದನಗಳೂ ಸತ್ತರೆ ಆ ಸಂಬಂಧವಾದ ಅಪ ಕೀರ್ತಿ ನಿಮಗೆ ಬರುತ್ತದೆ. ಬೆಂಗಳೂರಿನಲ್ಲಿ ನೀರು, ಆಹಾರ ಮುಂತಾದುವುಗಳಿಗೆ ಕೊರತೆ ಇಲ್ಲ ದಿರುವುದರಿಂದ ಮಂತ್ರಿಗಳಿಗೆ ಈ ಊರು ಅಪ್ಯಾಯಮಾನವಾಗಿರಬಹುದು. ಆದರೆ ಬೆಂಗಳೂರು ಜಿಲ್ಲೆಯಲ್ಲಿ ಜನರು ಕೆಲಸವಿಲ್ಲದೆ ಸಾಯುತ್ತಿದ್ದಾರೆ. ಆದುದರಿಂದ ಕಾನೂನನ್ನು ಸಡಿಲಮಾಡಿ ಜನ ರನ್ನು 3 ತಿಂಗಳಾದರೂ ಕಾಪಾಡಿ, ಆಮೇಲೆ ನಿಮಗೆ ಬೇಕಾದರೆ ನಾವೇ ದವಸ ಕೊಡುತ್ತೇವೆ ಎಂದು ಪ್ರಾರ್ಥಿಸುತ್ತೇನೆ.

MR. SPEAKER.—If the members want I will allow some clarification for a short while. If they do not want, they may make use of another opportunity.

SRI S. SHIVAPPA—This is a very important subject. I request the Hon'ble Chair to allow us to discuss it tomorrow.

MR. SPEAKER.—Under Rule 60, only 2½ hours are the maximum and beyond that I have no right to extend.

SRI S. SHIVAPPA.—Under the special circumstances, the Chief Minister will certainly agree to discuss it tomorrow. This is a very important matter and the House must know what is happening in other constituencies.

SRI S. M. KRISHNA.—Rule 60 does give the power to the Speaker to decide about the admissibility of a motion like this. Any rule may be suspenned by the Speaker if the motion is carried and any question may be suspended for the time being.

MR. SPEAKER.—If the member is able to get majority I have no objection. Members are simply talking without any purpose and they are not co-ordinating. If they want it they should have done it much

earlier and that is the practice. Even I will try to accommodate as much as possible. I will adjourn the House without doing anything. In the meanwhile members may please try to accommodate and try to get more time.

The House will now adjourn and meet tomorrow at 8-30 A. M.

The House adjourned at Twenty-five Minutes past Six of the Clock to meet again at Thirty Minutes past Eight of the Clock on Thursday, the 4th August 1966.